TIGHT BINDING BOOK

TEXT PROBLEM
WITHIN THE
BOOK ONLY
TEXT FLY WITHIN
THE BOOK ONLY

UNIVERSAL LIBRARY
OU_198510
UNIVERSAL LIBRARY

# ಮೈಸೂರು ವಿಶ್ವವಿದ್ಯಾನಿಲಯ

[illegible]

# ಮುಸ್ಲಿಂ ಸ್ತ್ರೀಯನ್ನು ಬೆಳಸಿದ ರಾಜರು

ಶೌಸೇಂದ್ರ . . . ಎಂ.ಎ., ಬಿ.ಟಿ.

[illegible]

ಏಜೆಂಟ್ :

ಆರ್. ಲಕ್ಷ್ಮೀನಾರಾಯಣ,

ಬುಕ್ ಸೆಲರ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ - ೩೭

# ಹಿಂದುಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು

ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

ಮೈಸೂರು

೧೯೪೩

ಮೊದಲನೆಯ ಮುದ್ರಣ—೨೦೦೨ ಪ್ರತಿಗಳು
೨೦-೫-೧೯೪೨

# ಮುನ್ನುಡಿ

ಈ ಪ್ರಚಾರಪುಸ್ತಕಮಾಲೆ ಮೂರು ವರ್ಷಗಳ ಹಿಂದೆ ಪ್ರಾರಂಭವಾಯಿತು. ಅತಿ ಸುಲಭವಾದ ಬೆಲೆಯಿಟ್ಟು ಇಂಥ ಪುಟ್ಟ ಪುಸ್ತಕಗಳನ್ನು ಹೊರಡಿಸಿದರೆ, ಅವನ್ನು ಓದಿ ಮೆಚ್ಚುವವರು ಮೈಸೂರಿನ ಜನರಲ್ಲಿ ಬಹುವಾಗಿ ದೊರೆಯುವರೆಂಬ ಭರವಸೆಯೇ ಈ ಪ್ರಯತ್ನಕ್ಕೆ ಪ್ರೇರಕ. ಮೊಟ್ಟಮೊದಲು ಮೈಸೂರು ವಿಶ್ವವಿದ್ಯಾನಿಲಯ ಕೈಕೊಂಡ ಈ ಹೊಸ ಮಾರ್ಗದ ಉದ್ಯಮವು ಅದನ್ನು ಏರ್ಪಡಿಸಿದವರ ಅತ್ಯಂತ ನಿರೀಕ್ಷೆಯನ್ನೂ ಮೀರಿ ಫಲಕಾರಿಯಾಗಿದೆಯೆಂದು ದಿಟವಾಗಿ ಹೇಳಬಹುದು. ಈ ಮೂರು ವರ್ಷಗಳಲ್ಲಿ ೩೪ ಪುಸ್ತಕಗಳು ಪ್ರಕಟವಾಗಿವೆ. ಇವುಗಳಲ್ಲಿ ೧೨ ಸಾಹಿತ್ಯಕ್ಕೆ ಸಂಬಂಧಪಟ್ಟವು; ೧೧ ಭೌತ ಮತ್ತು ಜೀವವಿಜ್ಞಾನಗಳನ್ನು ಕುರಿತವು; ಉಳಿದವನ್ನು ಸಾಮಾಜಿಕಶಾಸ್ತ್ರಗಳ ಗುಂಪಿಗೆ ಸೇರಿಸಬಹುದು. ಇವುಗಳ ವಿಷಯಕ್ಷೇತ್ರವು ವಿಶಾಲವಾದದ್ದು. ಕನ್ನಡದ ವಿಚಾರದಲ್ಲಿ ಯಾರ ಮಾತಿಗೆ ಮನ್ನಣೆಯಿದೆಯೋ ಅಂಥ ಮಹನೀಯರು ಈ ಪುಸ್ತಕಗಳನ್ನು ಅತ್ಯುತ್ಸಾಹದಿಂದ ಬರಮಾಡಿಕೊಂಡಿದ್ದಾರೆ. ಈ ಮಾಲೆಯಲ್ಲಿ ಹೊಸದೊಂದು ಪುಸ್ತಕ ಹೊರಬಿದ್ದ ದಿನವೇ ಸುಮಾರು ೬೦೦ ಪ್ರತಿಗಳು ಮಾರಾಟವಾಗುತ್ತವೆ; ಈ ಮೂರು ವರ್ಷಗಳ ಅವಧಿಯಲ್ಲಿ ಸುಮಾರು ೬೦,೦೦೦ ಪ್ರತಿಗಳು ವಿಕ್ರಯವಾಗಿವೆ. ಈ ಪುಸ್ತಕಮಾಲೆಯನ್ನು ಪ್ರಾರಂಭಿಸಿದವರು ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಛಾನ್ಸೆಲರ್ ಪದವಿಯಿಂದ ಈಗತಾನೆ ವಿಶ್ರಾಂತಿ ಪಡೆದಿರುವ ರಾಜಕಾರ್ಯಪ್ರವೀಣ ಶ್ರೀಮಾನ್ ಎನ್. ಎಸ್. ಸುಬ್ಬರಾಯರು;

ಇದು ಯುಕ್ತವಾಗಿಯೇ ಇಷ್ಟೊಂದು ಜನಪ್ರಿಯವಾಗಿರುವುದನ್ನು ನೋಡಿ ಅವರಿಗೆ ತುಂಬ ತೃಪ್ತಿಯುಂಟಾಗಿರಬೇಕು. ಈ ಪುಸ್ತಕಗಳನ್ನು ಯಾವ ಪ್ರತಿಫಲವೂ ಇಲ್ಲದೆ ಬರೆದು ಕೊಟ್ಟಿರುವ ಗ್ರಂಥಕರ್ತರಿಗೆ ಮೈಸೂರು ವಿಶ್ವವಿದ್ಯಾನಿಲಯದ ವಂದನೆಗಳು ಸಲ್ಲಬೇಕಾಗಿವೆ. ಈ ಮಾತುಗಳನ್ನು ಮುಗಿಸುವುದಕ್ಕೆ ಮುಂಚೆ ಈ ಮಾಲೆಯ ಪ್ರಧಾನ ಸಂಪಾದಕರಾದ ಶ್ರೀಮಾನ್ ಜಿ. ಹನುಮಂತರಾಯರನ್ನು ಕುರಿತು ಮೆಚ್ಚಿಕೆಯ ಮಾತೊಂದನ್ನು ನಾನು ಆಡದಿದ್ದರೆ ಲೋಪವಾದೀತು. ಸಂಪಾದಕ ಕಾರ್ಯದಲ್ಲಿ ಇವರು ಸಲ್ಲಿಸಿರುವ ಕಾಲ, ಶಕ್ತಿ, ಶ್ರದ್ಧೆ ಇವು ಎಷ್ಟೆಂಬುದು ಅವರ ದುಡಿಮೆಯನ್ನು ಹತ್ತಿರದಿಂದ ನೋಡಿದವರಿಗೆ ಮಾತ್ರ ಗೊತ್ತಾಗಬಲ್ಲುದು. ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರಪುಸ್ತಕಮಾಲೆ ಇಂದಿನಂತೆಯೇ ಮುಂದೆಯೂ ಬಹುಕಾಲ ಜನಪ್ರಿಯವಾಗಿ ನಿಲ್ಲಲೆಂದು ಹಾರೈಸುತ್ತೇವೆ.

ಮೈಸೂರು,
ತಾ॥ ೨೪-೪-೧೯೪೨.

**ಇ. ಜಿ. ಮೆಕಾಲ್ಪೈನ್**
ವೈಸ್-ಛಾನ್ಸೆಲರ್

# ಪ್ರಸ್ತಾವನೆ

“ ಇಸ್ಲಾಮೀ ಒಂದು ಕ್ರೂರಧರ್ಮ, ಅದರ ಅನುಯಾಯಿಗಳು ಕಲಹ ಪ್ರಿಯರು, ಲೂಟಿಯಿಂದ ಜೀವನಮಾಡುವರು.” ಇವೇ ಮುಂತಾದ ಅಭಿಪ್ರಾಯಗಳು ಪಾಠಶಾಲೆಯ ಪುಸ್ತಕಗಳಲ್ಲಿ ಕಂಡುಬರುವುವು. ಸ್ವಲ್ಪ ಪರಿಶೋಧನೆ ಮಾಡಿದಲ್ಲಿ ಈ ಅಭಿಪ್ರಾಯಗಳು ತಪ್ಪೆಂದು ತಿಳಿಯಬಹುದು. ಇಸ್ಲಾಂ ಎಂದರೆ “ ಶಾಂತಿ ” ಮತ್ತು “ ದೇವರಲ್ಲಿ ಶರಣು ” ಎಂದು ಅರ್ಥ. ಆತ್ಮರಕ್ಷಣೆಗಾಗಿ ಮಾತ್ರ ಯುದ್ಧ ಮಾಡಬಹುದೆಂದೂ ಅನ್ಯರ ಹಿಂಸೆಗಾಗಿ ಯುದ್ಧ ಮಾಡುವುದು ಅಧರ್ಮವೆಂದೂ ಅರಬ್ಬೀದೇಶದ ಮಹಮ್ಮದ್ ಪೈಗಂಬರರು ಅಪ್ಪಣೆಕೊಡಿಸಿರುವರು. ಯುದ್ಧ ಕಾಲದಲ್ಲಿ ಕೂಡ ಕಾರುಣ್ಯವನ್ನೂ ಸಹನವನ್ನೂ ತೋರಿಸಬೇಕೆಂದು ಆಜ್ಞಾಪಿಸಿರುವರು. ಅದರಂತೆಯೇ ಅರಬ್ಬೀದೇಶದ ಮುಸಲ್ಮಾನರೂ ಪರ್ಷಿಯದೇಶದ ಮುಸಲ್ಮಾನರೂ ತಮ್ಮ ದಿಗ್ವಿಜಯಗಳಲ್ಲಿ ಹಿಂಸಾತ್ಮಕವಾದ ಕ್ರೂರ ಕೃತ್ಯಗಳನ್ನು ಸಾಧ್ಯವಾದಷ್ಟೂ ಮಿತಿಯಲ್ಲಿಟ್ಟಿದ್ದರು. ಆದರೆ ನಿರಕ್ಷರರೂ ಅಸಭ್ಯರೂ ಆದ ತುರ್ಕಿಸ್ಥಾನದ ನಿವಾಸಿಗಳು ಸ್ವಾರ್ಥಪರರಾಗಿ ಇಸ್ಲಾಮೀ ಮತವನ್ನಂಗೀಕರಿಸಿ ಅದರ ನೆರಳಿನಲ್ಲಿ ತಮ್ಮ ಸ್ವಾಭಾವಿಕವಾದ ಪರಹಿಂಸೆಯನ್ನು ವ್ಯಕ್ತಪಡಿಸಿದರು. ಇವರೇ ಇಸ್ಲಾಮೀ ಧರ್ಮಕ್ಕೆ ಕಳಂಕ ತಂದವರೆಂದು ಅಲಿಗರ್ ವಿಶ್ವವಿದ್ಯಾಲಯದ ಪ್ರೊ|| ಎಂ. ಹಬೀಬ್ ಎಂಬವರು ಸಮರ್ಥನೆ ಮಾಡಿರುವರು. ಒರಟರಾದ ತುರುಕರು ಕೂಡ ಕಾಲಕ್ರಮದಲ್ಲಿ ಉತ್ತಮವಾದ ಸಭ್ಯತೆಯನ್ನು ಹೊಂದಿ ಹಿಂದೂಸ್ಥಾನವನ್ನು ಕಲಾವಿದ್ಯೆಗಳಿಗೆ ಕೇಂದ್ರವಾಗಿ ಮಾಡಿ ತಾವೂ ಕೀರ್ತಿಪಡೆದರು. ಇವರ ರಾಜ್ಯದ ನೆರಳಿನಲ್ಲಿ ಭಾರ

ತೀಯ ಸಂಸ್ಕೃತಿಗೆ ಪೋಷಣೆಯು ದೊರೆತು ವೃದ್ಧಿಹೊಂದಿತು. ಸಂಸ್ಕೃತ ಮತ್ತು ಪ್ರಾಕೃತಭಾಷೆಗಳು ಪುನರುಜ್ಜೀವನ ಗೊಂಡವು. ವಾಸ್ತುಶಿಲ್ಪ ಚಿತ್ರಕಲೆಗಳು ಹೊಸ ರೂಪವನ್ನು ಹೊಂದಿ ನಮ್ಮ ದೇಶಕ್ಕೆ ಕೀರ್ತಿಯನ್ನು ತಂದುವು. ಸಂಗೀತ ಕಲೆಯೂ ಪುಷ್ಟಿ ಹೊಂದಿತು. ಇಡೀ ಭರತಖಂಡದ ರಾಷ್ಟ್ರ ಭಾಷೆಯಾಗಲು ಯೋಗ್ಯವಾದ ಉರ್ದು ಭಾಷೆಯು ಉತ್ಪನ್ನ ವಾಯಿತು. ಧನಸಂಪತ್ತಿನಿಂದಲೂ ಉತ್ಕೃಷ್ಟವಾದ ಕಲಾ ಕೈಗಾರಿಕೆಗಳಿಂದಲೂ ಕೂಡಿ ಭರತಖಂಡವು ಜಗತ್ತಿನಲ್ಲೆಲ್ಲಾ ಖ್ಯಾತಿಯನ್ನು ಪಡೆಯಿತು. ಇದೊಂದು ಮೊಗಲ್ ಚಕ್ರವರ್ತಿ ಗಳ ರಾಜ್ಯಭಾರಕ್ರಮದ ಮುಖ್ಯ ಫಲಿತಾಂಶ.

ಮಹಮ್ಮದೀಯ ರಾಜರುಗಳೆಲ್ಲರೂ ಇದೇ ರೀತಿಯಾಗಿ ಹಿಂದುಗಳಲ್ಲಿ ಸಹಾನುಭೂತಿಯುಳ್ಳವರಾಗಿದ್ದರೆಂದು ತಿಳಿಯ ಬಾರದು. ಇಲ್ಲಿ ಹಿಂದು ವಿರೋಧಿಗಳಾದವರ ವಿಚಾರವನ್ನು ಹೇಳಿಲ್ಲ. ಹಿಂದುಮುಸ್ಲಿಂ ಸೌಹಾರ್ದವೇರ್ಪಡಲು ಮುಸಲ್ಮಾನ ರಾಜರುಗಳು ಮಾಡಿದ ಪ್ರಯತ್ನಗಳನ್ನು ಮಾತ್ರ ತಿಳಿಸುವುದೇ ಈ ಪುಸ್ತಕದ ಉದ್ದೇಶ. ಈ ಕೆಲಸ ಹಿಂದೆ ಎಷ್ಟು ಯಶಸ್ವಿ ಯಾಗಿ ನಡೆದಿದೆಯೋ ಇಂದೂ ಮುಂದೆಯೂ ಹಾಗೆಯೇ ನಡೆಯಲೆಂದು ಬಯಸುವೆನು.

ಈ ಪುಸ್ತಕದ ಹಸ್ತಪ್ರತಿಯನ್ನು ಪರಿಶೀಲಿಸಿ ಉಪಯುಕ್ತ ವಾದ ಸಲಹೆಗಳನ್ನು ಕೊಟ್ಟ ಶ್ರೀಮಾನ್ ಡಿ. ಎಲ್. ನರಸಿಂಹಾ ಚಾರ್ಯರಿಗೆ ನಾನು ತುಂಬ ಕೃತಜ್ಞನಾಗಿರುತ್ತೇನೆ.

ಫಾಲ್ಗುಣ ಶುದ್ಧ ಹುಣ್ಣಿಮೆ,
2-3-1942.

**ವಿ. ರಾಘವೇಂದ್ರರಾವ್**

# ವಿಷಯಸೂಚಿ


| | | ಪುಟ |
|---|---|---|
| ೧. ಉಪನ್ಯಾಸ ೧ | ...... | ೧ |
| ೨. ಉಪನ್ಯಾಸ ೨ | ....... | ೨೫ |

# ಹಿಂದುಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು

## ಉಪನ್ಯಾಸ ೧.

ಅರಬ್ಬೀದೇಶದ ಮಹಮದ್ ಪೈಗಂಬರರು (ಕ್ರಿ.ಶ. ೫೬೯-೬೩೨) ಕಲಹಪ್ರಿಯರಾದ ಅರಬ್ಬೀ ದೇಶದವರನ್ನು ಪಾವನರನ್ನಾಗಿಯೂ ಸುಶಿಕ್ಷಿತರನ್ನಾಗಿಯೂ ಮಾಡಿ ಒಂದು ಹೊಸ ರಾಜ್ಯವನ್ನು ಸ್ಥಾಪಿಸಿ ತಮ್ಮ ಕೀರ್ತಿಯನ್ನು ಆಚಂದ್ರಾರ್ಕವಾಗಿ ಜಗತ್ತಿನಲ್ಲಿ ನೆಲೆಗೊಳಿಸಿದರು. ಆವರ ತರುವಾಯ ಅವರ ಅನುಯಾಯಿಗಳು ಅರ್ಧಶತಮಾನದೊಳಗಾಗಿ ಅಟ್ಲಾಂಟಿಕ್ ಸಮುದ್ರದಿಂದ ಸಿಂಧೂನದಿಯವರೆಗೆ ಒಂದು ವಿಶಾಲವಾದ ಧರ್ಮಸಾಮ್ರಾಜ್ಯವನ್ನು ಸ್ಥಾಪಿಸಿದರು. ಇದರಿಂದ ಅರಬ್ಬೀ ದೇಶದವರಲ್ಲಿ ಒಂದು ಉತ್ಕೃಷ್ಟವಾದ ಕಲಾಕ್ಷೇತ್ರವೇ ಸ್ಥಾಪಿತವಾದಂತಾಯಿತು. ತಾವು ಆಕ್ರಮಣಮಾಡಿದ ಜನರ ಧರ್ಮ ಮತ್ತು ಆರ್ಥಗಳನ್ನು ರಕ್ಷಿಸಿ ಅರಬ್ಬೀದೇಶೀಯರು ತಮ್ಮ ಉದಾರನೀತಿಯನ್ನೂ ವಿದ್ಯಾಪಕ್ಷಪಾತವನ್ನೂ ಪ್ರಕಟಿಸಿದರು. ಇವರಲ್ಲಿ ಒಬ್ಬನಾದ ಮಹಮದ್‌ಬಿ಼ ಖಾಸಿಂ ಎಂಬ ಶೂರನು ಕ್ರಿ. ಶ. ೭೧೨ ರಲ್ಲಿ ಸಿಂಧೂ ಪ್ರಾಂತ್ಯವನ್ನು ಮುಸಲ್ಮಾನ್ ಸಾಮ್ರಾಜ್ಯಕ್ಕೆ ಸೇರಿಸಿದನು. ಧೀರನೂ ಉದಾತ್ತನೂ ಆದ ಖಾಸಿಮನು ನಿಷ್ಕಾರಣವಾಗಿ ಶಸ್ತ್ರರಹಿತರಾದ ಭಾರತೀಯರನ್ನು ಹಿಂಸೆಗೆ ಈಡುಮಾಡದೆ ಅವರಿಗೇ ತನ್ನ ರಾಜ್ಯದ ಆಡಳಿತವನ್ನು ಒಪ್ಪಿಸಿ ಅವರ ಧರ್ಮಬೋಧಕರಾದ ಬ್ರಾಹ್ಮಣರನ್ನೂ ಅವರ ಪೂಜ್ಯಸ್ಥಾನಗಳಾದ ದೇವಸ್ಥಾನಗಳನ್ನೂ ಅತಿ ಗೌರವದಿಂದ

ಪಾಲಿಸಿದನು. ಇವುಗಳ ಸಂರಕ್ಷಣೆಗಾಗಿ ರಾಜ್ಯದ ಉತ್ಪತ್ತಿಯಲ್ಲಿ ಶೇಕಡ ಮೂರರಂತೆ ಮೀಸಲಾಗಿಟ್ಟನು.

ನಿಗ್ರಹಭೇದಕನೆಂದೂ ಕಲಿಯೆಂದೂ ಪ್ರಖ್ಯಾತಿ ಪಡೆದ ಘಜನಿ ಮಹಮೂದನ ದಂಡಯಾತ್ರೆಗಳು ಕೇವಲ ಧರ್ಮ ವೈಷಮ್ಯದಿಂದ ಹುಟ್ಟಲಿಲ್ಲ. ಇಸ್ಲಾಂ ಧರ್ಮದ ಪ್ರಚಾರವು ಅವನ ಮತವಲ್ಲ. ಅನ್ಯದೇಶದ ಸಂಪತ್ತುಗಳನ್ನು ಲೂಟಿಮಾಡಿ ಕುಬೇರನಾಗುವುದೇ ಅವನ ಆಕಾಂಕ್ಷೆ. ಈ ಸುಲಿಗೆಯ ವ್ಯಾಪಾರದಲ್ಲಿ ಇವರು ಮುಸಲ್ಮಾನರು ಇವರು ಹಿಂದುಗಳು ಎಂಬ ಭೇದವನ್ನು ಅವನು ಎಣಿಸಲಿಲ್ಲ. ಹಿಂದೂಸ್ಥಾನವನ್ನು ಸೂರೆಗೊಂಡಂತೆಯೇ ಖುರಾಸಾನ್, ತುರ್ಕಿಸ್ಥಾನ್ ದೇಶೀಯ ರನ್ನೂ ನಿಷ್ಕರುಣೆಯಿಂದ ಸುಲಿಗೆಮಾಡಿದನು. ಭಾರತೀಯರ ದೇವಸ್ಥಾನಗಳಲ್ಲಿ ಅವರ ಸಂಪತ್ತುಗಳು ಕೇಂದ್ರೀಭೂತವಾಗಿದ್ದು ದರಿಂದ ಹಿಂದೂ ದೇವಾಲಯಗಳನ್ನು ಅವನು ಸೂರೆಮಾಡಿ ದನು. ಅಂದರೆ ದೇವಸ್ಥಾನಗಳಲ್ಲಿ ಚಿನ್ನ, ಬೆಳ್ಳಿ, ಮುತ್ತು, ರತ್ನಗಳು ದೇವರಿಗಾಗಿ ಶೇಖರವಾಡದೆ ಇದ್ದಲ್ಲಿ ಆ ದೇವಾ ಲಯಗಳು ಸುರಕ್ಷಿತವಾಗಿ ಇದ್ದಿರಬಹುದಾಗಿತ್ತು. ಇವನು ಬಲಾತ್ಕಾರವಾಗಿ ಒಬ್ಬ ಹಿಂದುವನ್ನೂ ಮುಸಲ್ಮಾನನನ್ನಾಗಿ ಮಾಡಲಿಲ್ಲ. ಇವನ ಸೈನ್ಯದಲ್ಲಿ ಹಿಂದುಗಳಾದ ರಾಜಪುತ್ರರೂ ಒಂದು ಅಂಗವಾಗಿದ್ದರು. ಇವರಿಗೋಸ್ಕರ ಪ್ರತ್ಯೇಕವಾದ ಬಿಡಾರಗಳನ್ನೂ ದೇವಾಲಯಗಳನ್ನೂ ತನ್ನ ಮುಖ್ಯಪಟ್ಟಣ ವಾದ ಘಜನಿಯಲ್ಲಿಯೇ ಕಟ್ಟಿಸಿಕೊಟ್ಟನು. "ತಿಲಕ್" ಎಂಬ ಹಿಂದೂ ಸೇನಾಪತಿಯು ಇವನ ಪ್ರೀತಿಗೌರವಗಳಿಗೆ ಪಾತ್ರ ನಾಗಿದ್ದನು. ಇವನಿಂದಲೇ ಮುಸಲ್ಮಾನ್ ದಂಗೆಕೋರರು ತಹಬಂದಿಗೆ ತರಲ್ಪಟ್ಟರು. ಆದರೂ ಹಿಂದೂ ದೇವಾಲಯ

ಗಳನ್ನು ಧ್ವಂಸಮಾಡಿದ ಘಜನಿ ಮಹಮೂದನು ಉಚ್ಚವಾದ ಇಸ್ಲಾಮಿ ಧರ್ಮಕ್ಕೆ ಒಂದು ದೊಡ್ಡ ಕಳಂಕವನ್ನು ತಂದು ಒಡ್ಡಿರುವನೆಂದು ಆಲಿಘರ್ ವಿಶ್ವವಿದ್ಯಾನಿಲಯದ ಆಚಾರ್ಯ ರೊಬ್ಬನು ಸಾರಿರುವನು.

ಘಜನೀ ಮಹಮೂದನ ಮಗನಾದ ಮಸೂದನು ಹಿಂದು ಗಳಲ್ಲಿ ವಿಶೇಷ ಗೌರವವನ್ನು ಪ್ರಕಟಿಸಿದನು. ಅವರ ಧರ್ಮ ಸಂರಕ್ಷಣೆಗಾಗಿ ಹೊಸ ಕಾನೂನುಗಳನ್ನು ಏರ್ಪಡಿಸಿದನು.

ಗುಲಾಮಿ ವಂಶದ ರಾಜರುಗಳಿಂದ ಹಿಂದುಗಳಿಗೆ ವಿಶೇಷ ವಾಗಿ ತೊಂದರೆಗಳೇನೂ ಆಗಲಿಲ್ಲ; ರಾಜ್ಯವಿಸ್ತಾರವೇ ಮುಖ್ಯಧ್ಯೇಯವಾಗಿ ಉಳ್ಳ ಈ ತುರುಷ್ಕ ಸರದಾರರು ಸ್ವಮತ ಪರಮತಗಳೆಂಬ ಭೇದಗಳಿಗೆ ಅಧಿಕ ಗಮನವನ್ನು ಕೊಡಲಿಲ್ಲ. ರಾಜ್ಯವನ್ನು ವಿಸ್ತರಿಸುವುದರಲ್ಲಿ ಲೀನರಾಗಿ ಹಿಂದುಗಳನ್ನು ಜಾತಿಭ್ರಷ್ಟರನ್ನಾಗಿ ಮಾಡುವಷ್ಟು ಧರ್ಮಾಂಧರಾಗಿ ಪ್ರವರ್ತಿಸ ಲಿಲ್ಲ. ಹಿಂದುಗಳು "ಜಿಜಿಯ" ಮತ್ತು ಇತರ ಕಂದಾಯ ಗಳನ್ನು ಸರಿಯಾಗಿ ಕೊಟ್ಟಲ್ಲಿ ಅವರ ಆಚಾರ ವ್ಯವಹಾರಗಳಿಗೆ ಈ ಸುಲ್ತಾನರು ಕೈಹಾಕುತ್ತಿರಲಿಲ್ಲ. ಸುಸಂಘಟಿತವಾದ ರಾಜ್ಯ ಸ್ಥಾಪನೆಯೇ ತನ್ನ ಮುಖ್ಯ ಕರ್ತವ್ಯವೆಂದು ತಿಳಿದು ಬಾಲ್ ಬನ್ ಚಕ್ರವರ್ತಿಯು ೪೦ ವರ್ಷಕಾಲ ಇದಕ್ಕಾಗಿಯೇ ದುಡಿದನು.

ಖಿಲ್ಜಿ ವಂಶದವನಾದ ಅಲ್ಲಾವುದ್ದೀನ್ ಚಕ್ರವರ್ತಿಯು ಒಂದು ಹೊಸ ಯುಗವನ್ನೇ ಪ್ರಾರಂಭಿಸಿದನು. ಇವನು ಕ್ರೂರ ಹೃದಯದವನೆಂದೂ ಹಿಂದುಗಳಿಗೆ ಹಿಂಸೆ ಕೊಡುವುದೇ ಅವನ ನಿತ್ಯಕರ್ಮವೆಂದೂ ಪಠ್ಯ ಪುಸ್ತಕಗಳಲ್ಲಿ ಕಂಡುಬರುವ ಅಭಿಪ್ರಾಯಗಳು ನಿರಾಧಾರವೆಂದು ಹೇಳಬಹುದು. ನಿಜಾಂಶ

ವೇನೆಂದರೆ ಪರಮತ ದ್ವೇಷಿಗಳಾವ ಮೌಲ್ವಿಗಳ ಉಪದೇಶಕ್ಕೆ ಮರುಳಾಗದೆ ತನ್ನದೇ ಆದ ನಿಷ್ಪಕ್ಷಪಾತ ಬುದ್ಧಿಯಿಂದ ರಾಜ್ಯಭಾರವನ್ನು ನಡೆಸಿದುದೇ ಇವನ ಅಪರಾಧ. ದಂಗೆಕೋರರಾದ ಮುಸಲ್ಮಾನರನ್ನೂ ಹಿಂದುಗಳನ್ನೂ ಒಂದೇ ಸಮನಾಗಿ ತಗ್ಗಿಸಿ ರಾಜ್ಯದಲ್ಲಿ ಶಾಂತಿಯನ್ನು ಸ್ಥಾಪಿಸಿದನು. ಒಂದು ಹೊಸ ಸೈನ್ಯವನ್ನು ನಿರ್ಮಾಣಮಾಡಿ ರಾಜ್ಯವನ್ನು ಸೂರೆಗೊಳ್ಳಲೋಸುಗ ಬಂದ ಮೊಗಲರನ್ನು ಸದೆಬಡಿದು ತನ್ನ ರಾಜ್ಯಕ್ಕೆ ಕ್ಷೇಮವನ್ನು ಉಂಟುಮಾಡಿದನು. ಅವನ ಆರ್ಥಿಕ ತಿದ್ದುಪಾಟುಗಳು ಜನಗಳಿಗೆ ಧನಧಾನ್ಯ ಸಮೃದ್ಧಿಯನ್ನುಂಟುಮಾಡಿದ್ದರಿಂದ ಇವನು ಜನಗಳ ಪ್ರೀತಿಗೆ ಪಾತ್ರನಾದನು. "ಭಾರತೀಯ ರಾಜರುಗಳಲ್ಲಿ ಅಲ್ಲಾವುದೀನನೇ ವಿಚಕ್ಷಣೆಯಲ್ಲಿಯೂ ಜನಪ್ರೀತಿಯಲ್ಲಿಯೂ ಅಗ್ರಸ್ಥಾನವನ್ನು ಪಡೆದಿರುವನು" ಎಂದು ಒಬ್ಬ ಮಹಮ್ಮದೀಯ ಯಾತ್ರಿಕನು ಬರೆದಿರುವನು.

ಇವನ ತರುವಾಯ ಬಂದ ಮಹಮ್ಮದ್ ಬಿನ್ ತೊಗಲಕನು ಕೂಡ ಇವನನ್ನೇ ಅನುಕರಿಸಿ ಸರ್ವಸಮ್ಮತವಾದ ರಾಜ್ಯವನ್ನು ಸ್ಥಾಪಿಸಲು ತನ್ನ ಜೀವಮಾನವನ್ನೆಲ್ಲಾ ಕಳೆದನು. ಇವನು ಹುಚ್ಚು ದೊರೆಯೂ ಅಲ್ಲ, ಅಸುರ ಸ್ವಭಾವದವನೂ ಅಲ್ಲ; ನಿಸ್ಸೀಮ ಪಂಡಿತನೂ ದಯಾಳುವೂ ಉದಾರಿಯೂ ನಿಜವಾದ ಇಸ್ಲಾಮಿ ಭಕ್ತನೂ ಆಗಿದ್ದನು. ಇವನಿಗೆ ಹಿಂದುಗಳಲ್ಲಿ ಅಧಿಕವಾದ ಪೂಜ್ಯಭಾವವೂ ಪ್ರೇಮವೂ ಇತ್ತು. ಹಿಂದುಗಳ ಮೇಲೆ ಫಿರ್ಯಾದು ಮಾಡಿದ ಮುಸಲ್ಮಾನರಿಗೆ ಶಿಕ್ಷೆ ವಿಧಿಸುತ್ತಿದ್ದನಂತೆ. ಇದನ್ನು ಸಹಿಸದ ಕೆಲವು ಚರಿತ್ರಕಾರರು ಇವನು ಏಲು ದೊರೆಯೆಂದು ಹೇಳಿ ಇವನ ಕೀರ್ತಿಗೆ ಕಳಂಕವನ್ನು ತಂದೊಡ್ಡಿರುವರು.

ಮಹಮದ್ ಬಿನ್ ತೊಗಲಕನು ತನ್ನ ತಂದೆಯನ್ನು ಕೊಂದು ರಾಜ್ಯವನ್ನು ಅಪಹರಿಸಿದನು ಎಂಬ ಅಪವಾದಕ್ಕೆ ಸರ್ವಸಮ್ಮತವಾದ, ನಿರ್ದುಷ್ಟವಾದ ಆಧಾರಗಳೇನೂ ದೊರೆತಿಲ್ಲ. ಈರ್ಷ್ಯಾಪರರಾದ ಶತ್ರುಗಳ ಊಹಾಪೋಹಗಳೂ ಚಾಡಿಮಾತುಗಳೂ ಸಮರ್ಪಕವಾದ ಆಧಾರವಾಗಲಾರವು. "ಮಾತೃ ಪರದೇವತಾ" ಎಂಬ ಮಂತ್ರವನ್ನು ಆಚರಿಸುತ್ತಿದ್ದ ಮಹಮದ್ ಬಿನ್ ತೊಗಲಕನು ನಿಷ್ಕಾರಣವಾಗಿ ತನ್ನ ತಂದೆಯನ್ನು ಕೊಂದನು ಎಂಬ ಅಪವಾದವು ನಂಬಲು ಅರ್ಹವಾದುದಲ್ಲ. "ತಾಯಿಯ ಪಾದಕಮಲದಲ್ಲೇ ಸ್ವರ್ಗವನ್ನು ಕಾಣಬಹುದು" ಎಂದು ತಿಳಿದು ತಿಂಗಳಿಗೆ ಒಂದು ಸಲ ತನ್ನ ಮಾತೆಯನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ತಾನೂ ತನ್ನ ಅನುಯಾಯಿಗಳೂ ನಮಸ್ಕಾರ ಮಾಡುತ್ತಿದ್ದರು. ಇಂಥ ಧರ್ಮಧುರಂಧರನು ಹೇಗೆತಾನೆ ತಂದೆಯನ್ನು ಕೊಲ್ಲುವನು ?[2]

ಇವನ ದಂಡಯಾತ್ರೆಯ ವಿಷಯವಾಗಿಯೂ ತಪ್ಪು ಅಭಿಪ್ರಾಯಗಳಿವೆ. ಚೀಣಾದೇಶಕ್ಕಾಗಲಿ, ಪರ್ಷಿಯಾ ದೇಶಕ್ಕಾಗಲಿ ಇವನು ದಂಡನ್ನು ಕಳುಹಿಸಲೇ ಇಲ್ಲ. ನೇಪಾಳದೇಶದ ಕೂರ್ಮಾಚಲದವರೆಗೂ ಹೋದ ವಿಜಯ ಯಾತ್ರೆಯನ್ನು ನಿಜಾಂಶ ತಿಳಿಯದ ಚರಿತ್ರಕಾರರು ಚೀಣಾ ದಂಡಯಾತ್ರೆಯೆಂದು ತಪ್ಪಾಗಿ ಬರೆದಿರುವರು. ನೇಪಾಳದ ದಂಡಯಾತ್ರೆ ಯಶಸ್ವಿಯಾಗಿ ಪರಿಣಮಿಸಿತು. ಸ್ವಲ್ಪ ಸೈನ್ಯವು ನಷ್ಟವಾದರೂ ಕಾರ್ಯ ಸಫಲವಾಗುವುದೇ ರಾಜರಿಗೆ ಕೀರ್ತಿಕರ. ಪರ್ಷಿಯಾ ದೇಶದ ದಂಡಯಾತ್ರೆಯಂತೂ ಕೇವಲ ಕಪೋಲ ಕಲ್ಪಿತ. ಪರ್ಷಿಯನ್ ರಾಜವಂಶದವರಲ್ಲಿ ಪರಸ್ಪರ ಕಲಹವು ಉಂಟಾ

---

[2] Mediaeval India, by Stanley Lane-Poole, p. 25.

ಯಿತು. ಅವರಲ್ಲಿ ಒಂದು ಪಂಗಡದವರು ಪ್ರಖ್ಯಾತನಾದ ಭಾರತ ಚಕ್ರವರ್ತಿಯ ಸಹಾಯವನ್ನು ಬೇಡಿದರು. ಅವರಿಗೆ ಸಹಾಯ ಮಾಡಲು ಅಲ್ಪಸ್ವಲ್ಪ ಸೈನ್ಯವನ್ನು ಶೇಖರಿಸಿದು ದೇನೋ ನಿಜ. ಆದರೆ ಪುನಃ ವಿಮರ್ಶೆ ಮಾಡಿ ತನಗೆ ಇದ ರಿಂದ ನಷ್ಟವೇ ಹೊರತು ಪ್ರಯೋಜನವು ಸ್ವಲ್ಪವೂ ಇಲ್ಲ ವೆಂದು ತಿಳಿದು ಸುಲ್ತಾನನು ಈ ಪರ್ಷಿಯಾ ದೇಶದ ಗೊಡ ವೆಗೇ ಹೋಗಲಿಲ್ಲ.[3] ಬಿಸಿಲುಕುದುರೆಯನ್ನು ಅಟ್ಟಿಕೊಂಡು ಹೋಗಿ ಜನ ಮನ ಧನಗಳಿಗೆ ನಷ್ಟವುಂಟುಮಾಡದೆ ಮುಂದಾ ಲೋಚನೆಯಿಂದ ಕ್ರಮವಾದ ರೀತಿಯನ್ನು ಅನುಸರಿಸಿದುದು ಇವನ ಮೇಧಾಶಕ್ತಿಯನ್ನು ಸೂಚಿಸುತ್ತದೆ. ಇವನು ಪರ್ಷಿಯಾ ದೇಶದ ದಾರಿಯಲ್ಲಿ ಒಂದು ಹೆಜ್ಜೆಯನ್ನೂ ಇಡಲಿಲ್ಲ.

ಕಂದಾಯಗಳನ್ನು ಹೆಚ್ಚಿಸಿ ಜನಗಳನ್ನು ಬೇಟೆಯಾಡಿದ ನೆಂಬುದು ಇನ್ನೊಂದು ಕಥೆ, ಅತಿಶಯೋಕ್ತಿ.[4] ಫಲವತ್ತಾದ ಯಮುನಾ ನದಿಯ ಪ್ರಾಂತಗಳಲ್ಲಿ ಮಾತ್ರ ಸ್ವಲ್ಪವಾಗಿ ಕಂದಾ ಯವನ್ನು ಹೆಚ್ಚಿಸಿದನು. ರೈತರ ಶಕ್ತಿಗೆ ಮೀರಿದ ದರವನ್ನು ವಿಧಿಸಲಿಲ್ಲ. ಇದನ್ನೇ ಈರ್ಷ್ಯಾಪರನಾದ ಬರಾನಿಯು ಇಮ್ಮಡಿ ಯೆಂದೂ ನಾಲ್ಮಡಿಯೆಂದೂ ಅತಿಶಯೋಕ್ತಿಯಿಂದ ವರ್ಣನೆ ಮಾಡಿರುವನು. ಅಮೀಲ್ದಾರರುಗಳು ರೈತರುಗಳನ್ನು ಅಲ್ಪ ಸ್ವಲ್ಪ ಪೀಡಿಸಿರಬಹುದು. ಆದರೆ ಜನಗಳು ಮನೆಮಠಗಳನ್ನು ಬಿಟ್ಟು ಕಾಡನ್ನು ಮರೆಹೊಕ್ಕರು ಎಂದೂ ಅಲ್ಲಿ ಅವರುಗಳ ನ್ನೆಲ್ಲಾ ಮೃಗಗಳನ್ನು ಬೇಟೆಯಾಡುವಂತೆ ಬೇಟೆಯಾಡಿ ಕೊಂದ

---

[3] Rise and Fall of Mohamed Bin Tughlak by Dr. Agha Mahdi Hussain, p. 125

[4] Ibid, p. 149-152

ನೆಂದೂ ಇರುವ ಬರಾನಿಯ ಹೇಳಿಕೆಯು ನಂಬಲು ಅನರ್ಹವಾದುದು. ಇದೇ ಸಮಯದಲ್ಲಿ ಬರಗಾಲವು ತಲೆದೋರಿ ಜನಗಳಿಗೆ ಕಂದಾಯ ಕೊಡಲು ಆಗಲಿಲ್ಲ. ಇವರ ಆರ್ತನಾದವನ್ನು ಕೇಳಿದ ಚಕ್ರವರ್ತಿಯು ಆರು ತಿಂಗಳ ಕಾಲ ಕ್ಷಾಮ ಪೀಡಿತರಾದ ತನ್ನ ಪ್ರಜೆಗಳಿಗೆ ಅನ್ನ ಬಟ್ಟೆಗಳನ್ನು ಕೊಟ್ಟು ಕಾಪಾಡಿದನು. ಅವರಿಗೋಸ್ಕರವೇ "ಸ್ವರ್ಗದ್ವಾರ" ವೆಂಬ ಒಂದು ಹೊಸ ಪಟ್ಟಣವನ್ನೇ ಸ್ಥಾಪಿಸಿದನು.

ಇನ್ನು ಇವನು ರಾಜಧಾನಿಯನ್ನು ದೇವಗಿರಿಗೆ ಬದಲಾಯಿಸಿದ ಪ್ರಸಂಗವನ್ನು ಪರಿಶೀಲಿಸೋಣ. ರಾಜಧಾನಿಯು ಒಂದು ಕೇಂದ್ರಸ್ಥಾನದಲ್ಲಿ ಇರುವುದು ಸರ್ವಸಮ್ಮತವಾದ ನ್ಯಾಯ. ದೇವಗಿರಿಯು ಇವನ ವಿಶಾಲವಾದ ರಾಜ್ಯದ ಮಧ್ಯ ಪ್ರದೇಶದಲ್ಲಿದ್ದಿತು. ಅಲ್ಲಿ ತನ್ನ ರಾಜಧಾನಿಯ ಕಛೇರಿಗಳನ್ನು ಸ್ಥಾಪಿಸಲು ಪ್ರಯತ್ನಮಾಡಿದುದು ಸಾಧುವೇ.

ಆದರೆ ದಿಲ್ಲೀಪಟ್ಟಣದ ಜನಗಳನ್ನೆಲ್ಲಾ ನಿರ್ಬಂಧಮಾಡಿ ಅವರನ್ನು ದೇವಗಿರಿಗೆ ಸಾಗಿಸಿದನು ಎಂಬುದು ನಿಜವಲ್ಲ. ಮೊಟ್ಟಮೊದಲು ಸರ್ಕಾರಿ ನೌಕರರು ಮಾತ್ರ ದೇವಗಿರಿಗೆ ಹೋಗಬೇಕೆಂದು ಆಜ್ಞಾಪಿಸಿದನು. ಸ್ವಲ್ಪದಿನಗಳು ಕಳೆದ ಮೇಲೆ ಮುಸಲ್ಮಾನ ಮುಖಂಡರನ್ನು ಮಟ್ಟಿಗೆ ದೇವಗಿರಿಗೆ ಹೋಗುವಂತೆ ಮಾಡಿದನು. ದಿಲ್ಲಿಯ ಹಿಂದುಗಳು ಸುರಕ್ಷಿತವಾಗಿ ಅಲ್ಲಿಯೇ ವಾಸವಾಗಿದ್ದರು. ಇವೇ ನಿಜವಾದ ವಿಷಯ, ತಥ್ಯಾಂಶ. ಒಂದು ಪಿಳ್ಳೆಯನ್ನೂ ಬಿಡದೆ ದಿಲ್ಲಿಯ ಜನಗಳನ್ನು ಏಳುನೂರು ಮೈಲಿಗಳ ದೂರ ಸಾಗಿಸಿದನು ಎಂಬುದು ನಿರುಪಪತ್ತಿಕವಾದ್ದು.[5] ದಿಲ್ಲಿಯಲ್ಲಿ ಇದ್ದ

---

[5] Ibid p. 122.

ಒಬ್ಬ ಕುಂಟನೂ ಒಬ್ಬ ಕುರುಡನೂ ಆನೆಕಾಲಿಗೆ ಕಟ್ಟಿ ಎಳೆಯಲ್ಪಟ್ಟರೆಂಬುದೂ ಕೇವಲ ನಿರಾಧಾರವಾದ ಮಾತು.

ಇನ್ನು ಅವನ ಹಣಕಾಸಿನ ವ್ಯವಸ್ಥೆ. ಟಂಕಸಾಲೆಯ ಏರ್ಪಾಡೂ ಮಹಮದನ ಕಾರ್ಯ ನಿಪುಣತೆಗೆ ಒಂದು ಹೆಗ್ಗುರುತು. ಬೆರಕೆಯಿಲ್ಲದ ಶುದ್ಧವಾದ ಚಿನ್ನ, ಬೆಳ್ಳಿ, ತಾಮ್ರಗಳಿಂದ ಹೊಸನಾಣ್ಯಗಳು ಅಚ್ಚುಹಾಕಲ್ಪಟ್ಟುವು. ವ್ಯಾಪಾರಿಗಳು ತಾಮ್ರದ ನಾಣ್ಯಗಳಿಲ್ಲದೆ ಬಹಳ ತೊಂದರೆಗೆ ಗುರಿಯಾಗಿದ್ದರು. ಇವನು ಏರ್ಪಡಿಸಿದ ಹೇರಳವಾದ ಚಿಲ್ಲರೆ ದುಡ್ಡುಗಳ ಸೌಲಭ್ಯದಿಂದ ವ್ಯಾಪಾರವೂ ವೃದ್ಧಿ ಹೊಂದಿತು. ಅವನ ನೆರೆಯ ಪ್ರದೇಶವಾದ ಚೀನಾದೇಶದಲ್ಲಿ, ಈಗಿನಂತೆ ಕಾಗದವೂ ನಾಣ್ಯಗಳಂತೆ ಬಳಕೆಯಲ್ಲಿದ್ದುವು. ಅದನ್ನು ನೋಡಿ ಸುಲ್ತಾನನು ತನ್ನ ರಾಜ್ಯದಲ್ಲಿ ಚಿನ್ನದ ನಾಣ್ಯಕ್ಕೆ ಬದಲಾಗಿ ತಾಮ್ರದ ನಾಣ್ಯಗಳನ್ನು ಪ್ರಚಾರಕ್ಕೆ ತಂದನು. ಸಾಮಾನ್ಯ ಜನರೂ ತಾಮ್ರ ನಾಣ್ಯಗಳನ್ನು ಹೊರಡಿಸಿದರು. ಇದನ್ನು ತಡೆಯಲು ರಾಜನಿಗೆ ಸಾಧ್ಯವಾಗಲಿಲ್ಲ. ತಾಮ್ರನಾಣ್ಯಗಳ ಬಾಹುಳ್ಯದಿಂದ ದರಗಳು ಹೆಚ್ಚಿದುವು. ಜನಗಳಿಗೆ ಬಹಳ ತೊಂದರೆಯಾಯಿತು. ಇದನ್ನು ನೋಡಿ ತಕ್ಷಣವೇ ಚಕ್ರವರ್ತಿಯು ತಾಮ್ರನಾಣ್ಯಗಳನ್ನು ಹಿಂದಕ್ಕೆ ತೆಗೆದುಕೊಂಡು ಅವಕ್ಕೆ ಬದಲಾಗಿ ಚಿನ್ನದ ನಾಣ್ಯಗಳನ್ನು ಕೊಟ್ಟು ಜನಗಳಲ್ಲಿ ಸಮಾಧಾನವನ್ನು ಏರ್ಪಡಿಸಿದನು. ಈ ಹೊಸ ಏರ್ಪಾಟು ಚಿನ್ನದ ಅಭಾವದಿಂದ ಮಾಡಿದುದಲ್ಲ; ಅವನ ಹುಚ್ಚುತನದಿಂದಲೂ ಮಾಡಿದುದಲ್ಲ; ಈ ಪ್ರಯೋಗವು ತೊಗಲಕನ ಪಾಂಡಿತ್ಯದ ಪರಿಣಾಮ.

ವ್ಯಾಪಾರವೃದ್ಧಿಗೂ ಜನಗಳ ಸೌಕರ್ಯಕ್ಕೂ ಅಂಚೆಯ ವ್ಯವಸ್ಥೆಯು ಏರ್ಪಟ್ಟಿತು. ಕಾಗದಪತ್ರಗಳನ್ನೂ ವರ್ತಮಾನ

ಗಳನ್ನೂ, ಸಾಗಿಸಲು ಕುದುರೆಯ ಸವಾರರೂ ಕಾಲಾಳುಗಳೂ ನೇಮಿಸಲ್ಪಟ್ಟರು.

ತೊಗಲಕನು ನ್ಯಾಯಪಕ್ಷಪಾತಿ. ಧರ್ಮಯುಕ್ತವಾದ ನೀತಿಯನ್ನು ಪ್ರತಿಯೊಬ್ಬ ನ್ಯಾಯಾಧೀಶನೂ ಪರಿಪಾಲಿಸುವುದೆಂದು ರಾಜನು ಕಟ್ಟಾಜ್ಞೆಯಿಟ್ಟನು. ಒಂದು ಸಲ ಒಬ್ಬ ಬಡಪಾಯಿ ಚಕ್ರವರ್ತಿಯ ಮೇಲೆ ಫಿರ್ಯಾದುಮಾಡಿದನು. ಆಗ ತೊಗಲಕನು ಸಾಮಾನ್ಯಮನುಷ್ಯನಂತೆ ನ್ಯಾಯಾಧೀಶನ ಮುಂದೆ ಬಂದು ನಿಂತು ವಿನಯದಿಂದ ವರ್ತಿಸಿ ಅವನು ವಿಧಿಸಿದ ದಂಡವನ್ನು ಅತಿಭಕ್ತಿಯಿಂದ ಅಂಗೀಕರಿಸಿ ಅವನ ತೀರ್ಮಾನವನ್ನು ನೆರವೇರಿಸಿದನು. ಇಂತಹ ನ್ಯಾಯಮೂರ್ತಿಗಳಾದ ಚಕ್ರವರ್ತಿಗಳು ವಿರಳ.[6]

ವೇದಾಂತತತ್ವದಲ್ಲಿ ತೊಗಲಕನಿಗೆ ಮಹತ್ತರವಾದ ಅಭಿಮಾನವಿತ್ತು; ಪಂಡಿತರಲ್ಲಿಯೂ ತತ್ವಜ್ಞರಲ್ಲಿಯೂ ಚರ್ಚೆ ಮಾಡುವುದರಲ್ಲಿ ಇವನಿಗೆ ಅಧಿಕವಾದ ಕುತೂಹಲವಿದ್ದಿತು. ಹಿಂದು ವೇದಾಂತಿಗಳೂ ಸುಫಿತತ್ವಜ್ಞರೂ ಇವನ ಬಳಿಯಲ್ಲಿ ವಿಶೇಷವಾಗಿ ಇರುತ್ತಿದ್ದರು. ಸುನ್ನಿಪಂಗಡದವರಾದ ಬರಾನಿ ಮುಂತಾದವರಿಗೆ ಇದು ಸರಿಬೀಳಲಿಲ್ಲ. ಇವನನ್ನು ದೂಷಿಸಲು ಮೊದಲುಮಾಡಿದರು. ರಾಜನಾದರೊ ಸರ್ವರೂ ಸಮಾನರೆಂಬ ತತ್ವವೇ ತನ್ನ ಮುಖ್ಯಧರ್ಮವೆಂದು ತಿಳಿದಿದ್ದನು. ಇವನೇ ಅಕ್ಬರನಿಗೆ ಮುಖ್ಯ ಮೇಲ್ಪಂಕ್ತಿ.

ಫಿರೋಜ್ ಷಾ ತೊಗಲಕನು ಸುಲ್ತಾನರಲ್ಲೆಲ್ಲಾ ಧರ್ಮಾಂಧನೆಂದೂ ಪರಮತ ದ್ವೇಷಿಯೆಂದೂ ಹೆಸರು ಪಡೆದಿರುವನು. ಆದರೂ ಇವನು ಸರಳಮನಸ್ಕನೂ ಪ್ರಾಣಿದಯೆಯುಳ್ಳವನೂ

---

[6] Mediaeval India by Stanley Lane-Poole p. 23.

ಆಗಿದ್ದನು. ನ್ಯಾಯದಿಂದಲೂ ಶಾಂತಿಯಿಂದಲೂ ರಾಜ್ಯ ಸೂತ್ರವನ್ನು ನಡೆಸುವುದೇ ಇವನ ಮುಖ್ಯ ಧ್ಯೇಯ ವಾಗಿತ್ತು. ಅನೇಕ ವಿಧವಾದ ಕಂದಾಯಗಳನ್ನು ತಪ್ಪಿಸಿ ರೈತರ ಜೀವನವನ್ನು ಸುಖಕರವಾಗಿ ಮಾಡಿದನು. ವಿದ್ಯಾ ಪಕ್ಷಪಾತಿಯಾದ ಸುಲ್ತಾನನು ಅನೇಕ ಪಾಠಶಾಲೆಗಳನ್ನೂ, ಧರ್ಮಶಾಲೆಗಳನ್ನೂ ಸ್ಥಾಪಿಸಿ, ಹಿಂದುಗಳ ಇತಿಹಾಸ ಪುರಾಣ ಗಳನ್ನು ತನ್ನ ಭಾಷೆಗೆ ಭಾಷಾಂತರಿಸುವಂತೆ ಆಜ್ಞಾಪಿಸಿದನು. ಯುದ್ಧಗಳಿಂದ ವ್ಯರ್ಥವಾಗಿ ನರಹತ್ಯವಾಗುವುದೆಂದೂ, ಇದು ದೇವರಿಗೆ ಸಮ್ಮತವಾದ ಧರ್ಮವಲ್ಲವೆಂದೂ ತಿಳಿದು ಯುದ್ಧ ಹೂಡಬೇಕಾದ ಸಮಯದಲ್ಲಿ ಜುಗುಪ್ಸೆಯನ್ನು ತೋರಿಸುತ್ತಿ ದ್ದನು. ಯುದ್ಧಗಳಲ್ಲಿ ಶತ್ರುಗಳನ್ನು ಅನಾವಶ್ಯಕವಾಗಿ ಕೊಲ್ಲ ಬಾರದೆಂದು ತನ್ನ ಸೈನ್ಯಗಳಿಗೆ ಆಜ್ಞೆಮಾಡಿದ್ದನು.

ಶಿಕಂದರ್ ಲೂಡಿಯು ರಾಜ್ಯದ ಆಡಳಿತದಲ್ಲಿ ಹಿಂದುಗಳಿಗೆ ವಿಶೇಷವಾದ ಉತ್ತೇಜನವನ್ನು ತೋರಿಸಿದನು. ಅವರುಗಳಿಗೆ ಪಾರ್ಶಿ ಭಾಷೆಯನ್ನು ಕಲಿಸಿ ಅವರನ್ನು ನಾನಾವಿಧ ಸರಕಾರಿ ಹುದ್ದೆಯಲ್ಲಿ ನೇಮಕಮಾಡಿದನು.[7] ಲೂದಿ ವಂಶದ ದೊರೆಗಳ ಮಂತ್ರಿಗಳೆಲ್ಲರೂ ಹಿಂದೂಗಳೇ ಆಗಿದ್ದರು. ಅಧಿಕಾರಸ್ಥಾನ ಗಳಲ್ಲಾಗಲಿ ವ್ಯಾಪಾರದಲ್ಲಾಗಲಿ ಕೆಲಸಗಾರರಲ್ಲಾಗಲಿ ಎಲ್ಲಿ ನೋಡಿದರೂ ಹಿಂದುಗಳು ಅಧಿಕ ಸಂಖ್ಯೆಯಲ್ಲಿದ್ದರೆಂದು ಬಾಬರನು ಬರೆದಿರುವನು.[8]

/ ದಿಲ್ಲೀ ಸಾಮ್ರಾಜ್ಯವು ಒಡೆದುದು ಹಿಂದುಗಳಿಗೆ ಒಂದು

---

7 Proceedings of the Indian History Congress, p. 724.

8 Ibid, p. 724

ಷುಯೋಗವೇ ಆಗಿತ್ತು. ಈ ಸಣ್ಣ ಪುಟ್ಟ ರಾಜ್ಯಗಳಲ್ಲಿ ಹಿಂದುಗಳಿಗೆ ವಿಶೇಷ ಗೌರವವು ದೊರಕಿತು. ರಾಜ್ಯ ಸೂತ್ರಗಳು ಇವರ ಕೈಗೆ ಸಿಕ್ಕಿದವು. ವಂಗದೇಶದ ಸುಲ್ತಾನರು ದೇಶೀಯರಿಗೆ ಅಮಾತ್ಯ, ಪ್ರಧಾನ್ ಮುಂತಾದ ಅಧಿಕಾರವನ್ನು ಕೊಟ್ಟು ಪ್ರಜೆಗಳ ಪ್ರೀತಿಗೆ ಪಾತ್ರರಾದರು. ಹಿಂದುಗಳೇ ಸರ್ವಾಧಿಕಾರವನ್ನು ಪಡೆದಿದ್ದರು. ನಾಮ ಮಾತ್ರಕ್ಕೆ ಸುಲ್ತಾನರು. ಪರಸ್ಪರ ಮತವೈಷಮ್ಯಗಳನ್ನು ತೊಲಗಿಸಿ ಎಲ್ಲರೂ ಒಪ್ಪುವಂಥಾ "ಸತ್ಯಾಪೀರ್" ಎಂಬ ಹೊಸಧರ್ಮವೇ ಸ್ಥಾಪನವಾಯಿತು. ಬಂಗಾಲಿ ಭಾಷೆಯು ಮುಂದುವರಿಯಿತು. ರಾಮಾಯಣ ಮಹಾಭಾರತಗಳು ಬಂಗಾಲಿಭಾಷೆಯಲ್ಲಿ ಬರೆಯಲ್ಪಟ್ಟವು. ಬಹಮನಿ, ಬಿಜಾಪೂರ್, ಗೋಲಕೊಂಡ ಮುಂತಾದ ರಾಜ್ಯಗಳಲ್ಲಿಯೂ ಹಿಂದುಗಳ ಪ್ರಶಸ್ತಿಯು ತಲೆದೋರಿತು. ಷಹಾಜಿ, ನೇತಾಜಿ, ಅಕ್ಕಣ್ಣ, ಮಾದಣ್ಣ, ಮುಂತಾದವರು ರಾಜಕರ್ತರುಗಳಾದರು (King-makers). ದೇಶಭಾಷೆಗಳಾದ ಮರಾಠಿ, ತೆಲುಗು, ಉರ್ದುಭಾಷೆಗಳು ವೃದ್ಧಿಗೊಂಡವು. ಕಬೀರ್, ನಾನಕ್ ಮುಂತಾದ ಮಹಾತ್ಮರು ಹಿಂದು ಮುಸಲ್ಮಾನರ ಸೌಹಾರ್ದವನ್ನು ಜನಗಳ ಮನಸ್ಸಿನಲ್ಲಿ ಬಿತ್ತುತ್ತಿದ್ದರು. ಪರಸ್ಪರ ಮತಗೌರವವೂ ಉತ್ತೇಜನವೂ ಜನಗಳಲ್ಲಿ ತಲೆದೋರಿದುವು.

ಮೊಗಲ್ ಸಾಮ್ರಾಜ್ಯಸ್ಥಾಪನೆಯಾದ ಮೇಲಂತೂ ಭಾರತೀಯರ ಪರಮ ಧ್ಯೇಯವಾದ ಹಿಂದು ಮುಸಲ್ಮಾನರ ಭ್ರಾತೃಭಾವವು ಪುಷ್ಟಿಗೊಂಡು ಪರಮಾವಧಿಯನ್ನು ಮುಟ್ಟಿತು. ಮೊಗಲರ ಮೂಲಪುರುಷನಾದ ಬಾಬರನು ಇದಕ್ಕೋಸ್ಕರವೇ ಹೆಣಗಾಡಿದನು. ತನ್ನ ರಾಜನೀತಿಯ ರಹಸ್ಯವನ್ನು ತನ್ನ

ಮರಣಶಾಸನದಲ್ಲಿ ಬರೆದು ಅದನ್ನು ತನ್ನ ಪ್ರೀತಿಯಪುತ್ರನಾದ ಹುಮಾಯೂನನ ಕೈಯಲ್ಲಿ ಇಟ್ಟನು. "ಈ ಭಾರತಭೂಮಿಯು ವಿಶೇಷವಾಗಿ ಹಿಂದುಮತದವರಿಂದ ತುಂಬಿರುವುದು. ಅವರ ಪ್ರೀತಿಯನ್ನು ಗಳಿಸುವುದು ಅತ್ಯಾವಶ್ಯಕ. ಹೆದರಿಕೆಗಳಿಂದ ಇದು ಸಾಧ್ಯವಲ್ಲ. ಉದಾರಭಾವನೆಗಳಿಂದ ಅವರ ಮನಸ್ಸನ್ನು ಒಲಿಸಿಕೊಳ್ಳುವುದೇ ಸೂಕ್ತವಾದದ್ದು. ಆದುದರಿಂದ ಗೋಹತ್ಯೆ ವನ್ನು ಈ ರಾಜ್ಯದಲ್ಲಿ ನಿರ್ಬಂಧದಿಂದ ನಿಲ್ಲಿಸು; ಅವರ ಮುಖಂಡರುಗಳನ್ನು ಗೌರವಿಸು, ಹೀಗೆ ಮಾಡಿದಲ್ಲಿ ನಮ್ಮ ರಾಜ್ಯವು ಚಿರಸ್ಥಾಯಿಯಾಗುವುದು" ಹೀಗೆ ಬಾಬರನು ಅವನ ಮರಣಶಾಸನದಲ್ಲಿ ಉಪದೇಶಮಾಡಿರುವನು.[9]

ಮೊಗಲರ ವೈರಿಯಾದ ಷೇರ್‌ಷಹನಂತೂ ರಾಜ್ಯದಲ್ಲಿ ಹಿಂದುಗಳಿಗೂ ಮುಹಮ್ಮದೀಯರಿಗೂ ಒಂದೇ ಸಮನಾದ ಅಧಿಕಾರವನ್ನೂ ಜವಾಬ್ದಾರಿಯನ್ನೂ ಕೊಟ್ಟು ಪರಸ್ಪರ ಸೌಹಾರ್ದವೆಂಬ ಚಿಲುಮೆ ಉಕ್ಕಿ ಹರಿಯುವಂತೆ ಮಾಡಿದನು. ಹಿಂದುಗಳಿಗೆ ದೊಡ್ಡ ಅಧಿಕಾರವನ್ನೂ ಕೊಟ್ಟನು. ತೋದರ ಮಲ್ಲನೇ ಇವರಲ್ಲಿ ಮುಖಂಡನು. ತನ್ನ ದೇಶದಲ್ಲೆಲ್ಲೆಲ್ಲಿಯೂ ಹಿಂದುಗಳಿಗೂ ಮುಸಲ್ಮಾನರಿಗೂ ಪ್ರತ್ಯೇಕವಾಗಿ ಮುಸಾಫರ್ ಖಾನೆಗಳನ್ನು ಸ್ಥಾಪಿಸಿದನು. ಹಿಂದು ಮುಸಾಫರ್ ಖಾನೆ ಯಲ್ಲಿ ಬ್ರಾಹ್ಮಣ ಪರಿಚಾರಕರು ನೇಮಿಸಲ್ಪಟ್ಟರು. ಸಂಸ್ಕೃತ ಭಾಷೆಗೆ ಗೌರವವು ದೊರೆಯಿತು. ಹುಕುಂನಾಮೆಗಳೂ ಫರ್ ಮಾನ್‌ಗಳೂ ಸಂಸ್ಕೃತ ಮತ್ತು ಪರ್ಷಿಯನ್ ಭಾಷೆಗಳಲ್ಲಿ

---

[9] The Will and Testament of Zahiruddin Muhammad Babur Padsha. Quarterly Journal of The Mythic Society, Vol. XVIII, p. 116.

ಬರೆಯಲ್ಪಟ್ಟವು. ತನ್ನ ನಾಲ್ಕು ವರ್ಷಗಳ ಆಳ್ವಿಕೆಯಲ್ಲಿ ಇವನು ಜನಗಳಿಗೆ ಮಾಡಿದ ಉಪಕಾರಗಳಿಗೂ ರಾಜ್ಯಾಡಳಿತ ದಲ್ಲಿ ಮಾಡಿದ ತಿದ್ದುಪಾಟುಗಳಿಗೂ ಸಮನಾದವು ಚರಿತ್ರೆಯಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. ಚರಿತ್ರೆಯಲ್ಲಿ ಇವನಿಗೆ ಸದೃಶನಾದವನೆಂದರೆ ಬಹುಶಃ ಜೂಲಿಯಸ್ ಸೀಸರ್ ಒಬ್ಬನೇ. ಇವನ ವಂಶವು ನಿರ್ಮೂಲವಾದರೂ ಇವನ ತಿದ್ದುಪಾಟುಗಳು ಬೇರೂರಿ ಇವನ ಶತ್ರುವಾದ ಅಕ್ಬರನು ಕೂಡ ಅವುಗಳನ್ನು ಅನುಸರಿಸಬೇಕಾಯಿತು.

ಅಕ್ಬರ್ ಮಹಾಶಯನು ಮುಸಲ್ಮಾನ್ ಚಕ್ರವರ್ತಿಗಳಲ್ಲಿ ಚೂಡಾಮಣಿ ಎನ್ನಬಹುದು. ಇವನ ನಿಸ್ಸೀಮ ಸಾಹಸವೂ ಕಾರ್ಯದಕ್ಷತೆಯೂ ಅದ್ವಿತೀಯ ಮೇಧಾಶಕ್ತಿಯೂ ವಿಶ್ವವ್ಯಾಪಿ ಯಾದ ಔದಾರ್ಯವೂ ಇಡಿಭರತಖಂಡದ ಜನರನ್ನೆಲ್ಲಾ ಆಶ್ಚ ರ್ಯಗೊಳಿಸಿತು. ಇವನ ಕೀರ್ತಿ ದಿಗಂತದವರೆಗೂ ವ್ಯಾಪಿ ಸಿತು. ಇಂಥ ಮಹಾಪುರುಷನ ಅವತಾರವು ಭಾರತೀಯರ ಪುಣ್ಯವೆಂದು ನಿರ್ವಿವಾದವಾಗಿ ಹೇಳಬಹುದು. ಅರ್ಧಶತಮಾ ನದ ಆಡಳಿತದಲ್ಲಿ (A. D. 1556-1605) ಭಾರತಭೂಮಿಯ ಜೀವನದಲ್ಲಿ ಉದಾತ್ತವಾದ ಧ್ಯೇಯಗಳು ನೆಲಸಿದುವು. ಇವನು ದೂರದರ್ಶಿಯೂ ದಯಾಳುವೂ ಧೀರನೂ ಆದ ರಾಜನೀತಿ ನಿಪುಣನೆಂದು ಚಿಕ್ಕವಯಸ್ಸಿನಲ್ಲಿಯೇ ಪ್ರಖ್ಯಾತಿಪಡೆದನು. ಆದ್ದರಿಂದಲೇ ಇವನು ಹೇಮುವನ್ನು ಕೊಲ್ಲಲು ಹೇಸಿದನು. ಹಿಂದುಗಳ ಮೇಲಿನ ತೆರಿಗೆಗಳನ್ನು ವಜಾಮಾಡಿದನು. ರಾಜ ಪುತ್ರರೊಡನೆ ಸ್ನೇಹಸಂಬಂಧವನ್ನು ಬೆಳಸಿದನು. ಸಾಮಾನ್ಯ ಜನರ ಸೌಖ್ಯವೇ ತನ್ನ ಸೌಖ್ಯವೆಂದು ತಿಳಿದು ಹಗಲಿರುಳೂ ಒಂದೇ ಸಮನಾಗಿ ದುಡಿದನು. ಇವನು ಮಾಡಿದ ನೆಲಗಂದಾ



ಅಕ್ಬರ್

Reproduced from block loaned by
Messrs. Longmans Green & Co.

ಯಂದ ಏರ್ಪಾಡು ಪ್ರೈತರಿಗೆ ಕ್ಷೇಮವನ್ನೂ ರಾಜನಿಗೆ ಕೀರ್ತಿಯನ್ನೂ ತಂದವು. ಇವನ ಧರ್ಮಸುಧಾರಣೆಗಳಂತೂ ಇವನ ಕೀರ್ತಿಯನ್ನು ಶಾಶ್ವತಗೊಳಿಸಿದುವು. ಅಸಹನೀಯವಾಗಿದ್ದ ಮತವೈಷಮ್ಯಗಳನ್ನು ಹೋಗಲಾಡಿಸಿ ಏಕಧರ್ಮವನ್ನು ಪಾಲಿಸುವ ಒಂದು ಜನಾಂಗವನ್ನು (Nation) ನಿರ್ಮಾಣಮಾಡುವುದಕ್ಕೋಸ್ಕರ. "ದೀನಿ ಇಲ್ಲಾಹಿ" ಮತವನ್ನು ಸ್ಥಾಪಿಸಿದನು. ಸಂಕುಚಿತ ಮನಸ್ಕರಾದ ಅವನ ಸಮಕಾಲೀನರಿಗೆ ಇದು ಸರಿಹೋಗಲಿಲ್ಲ. ಇದರಿಂದ ಈ ಮಹಾತ್ಮನ ಉತ್ಕೃಷ್ಟವಾದ ಆಶೆಯು ನಿರಾಶೆಯಾಯಿತು.

ಆದರೂ ರಾಜಕೀಯದಲ್ಲಿ ಅಕ್ಬರನು ಹಾಕಿದ ಮೇಲ್ಪಂಕ್ತಿಯು ಸ್ಥಿರವಾಯಿತು. ಮುಸಲ್ಮಾನರಾಜ್ಯದಲ್ಲಿ ಹಿಂದುಗಳಿಗೆ ಅಭಿಮಾನವೂ ಉತ್ಸಾಹವೂ ಹುಟ್ಟಿದುವು. ಹಿಂದು ಮುಸಲ್ಮಾನರಲ್ಲಿ ಸೌಹಾರ್ದವು ವೃದ್ಧಿಗೊಂಡಿತು.

ಜಹಾಂಗೀರ್ ಚಕ್ರವರ್ತಿಯು ಅಕ್ಬರನ ಉದ್ದೇಶವನ್ನು ಮನಃಪೂರ್ವಕವಾಗಿ ಎತ್ತಿಹಿಡಿದನು. ಪಟ್ಟಾಭಿಷಿಕ್ತನಾದ ಕೂಡಲೇ ತನ್ನ ಅರಮನೆಯ ಮುಂದೆ ಒಂದು ದೊಡ್ಡ ಗಂಟೆಯನ್ನು ಕಟ್ಟಿಸಿದನು ಕಷ್ಟ ಅನ್ಯಾಯಗಳಿಗೆ ಈಡಾದ ಯಾವ ಪ್ರಜೆಯಾದರೂ ಈ ಗಂಟೆಯನ್ನು ಬಾರಿಸಿ, ರಾಜನ ಮುಂದೆ ತನ್ನ ಅಹವಾಲನ್ನು ನಿರೂಪಿಸಿ ತನ್ನ ಕಷ್ಟನಷ್ಟಗಳನ್ನು ಪರಿಹರಿಸಿಕೊಳ್ಳಬಹುದಾಗಿತ್ತು. ನಿಷ್ಪಕ್ಷಪಾತವಾದ ನ್ಯಾಯವಿಮರ್ಶೆಯಲ್ಲಿ ಜಹಂಗೀರನಿಗೆ ಸಮನಾದವನಿಲ್ಲ. ತನ್ನ ಪ್ರಿಯ ರಾಣಿಯಮೇಲೆ ಬಂದ ಆಪಾದನೆಯನ್ನು ಕೂಡ ನ್ಯಾಯಸಮ್ಮತವಾಗಿ ತೀರ್ಮಾನಮಾಡಿದನೆಂದು ಪ್ರತಿಯೊಬ್ಬ ಭಾರತೀಯನೂ ತಿಳಿದಿರುವನು. ಇವನ ಕಾಲದಲ್ಲಿ ನೆಲಗಂದಾಯ ಕಡಮೆ



ಜಹಾಂಗೀರ್

Reproduced from block loaned by
Messrs. Longmans Green & Co.

ಯಾಯಿತು; ರೈತರ ಸಂರಕ್ಷಣೆಗೆ ಆವಶ್ಯಕವಾದ ಹೊಸ ಕಾನೂನುಗಳು ಏರ್ಪಟ್ಟುವು. ತನ್ನ ತಂದೆಯಂತೆ ಜಹಾಂಗೀರನೂ ತತ್ವಾನ್ವೇಷಿ. ಹಿಂದು ಯೋಗಿಯಾದ "ಯಾದವರೂಪ" ಎಂಬವನು ಜಹಾಂಗೀರನ ಪ್ರೀತಿಗೂ ಗೌರವಕ್ಕೂ ಪಾತ್ರನಾಗಿದ್ದನು.[11] ದೊರೆಯ ಮುಂದೆ ಕುಳಿತು ಮಾತನಾಡುವ ಸಲುಗೆ ರಾಜನ ಮಗನಿಗೆ ಕೂಡ ಇರಲಿಲ್ಲ. ಆದರೆ ಈ ಬಡಬ್ರಾಹ್ಮಣನು ದೊರೆಯ ಮುಂದೆ ಕುಳಿತು ಸಲುಗೆಯಿಂದ ಮಾತನಾಡುತ್ತಿದ್ದನು. ಇಡೀ ಭರತಖಂಡದ ಚಕ್ರವರ್ತಿಯು ಈ ಗೋಸಾಯಿಯನ್ನು ಎಲ್ಲಿ ಕಂಡರೆ ಅಲ್ಲಿ ಪ್ರಣಾಮಮಾಡುತ್ತಿದ್ದನು. ಇಂಥ ದೈವಜ್ಞರ ಸಹವಾಸದಲ್ಲಿ ಕಾಲವನ್ನು ಕಳೆವುದು ಅವನಿಗೆ ಪರಮಾನಂದವಾಗಿ ತೋರುತ್ತಿತ್ತು.

ಜಹಾಂಗೀರನ ಕಾಲದಲ್ಲೇ ಹಿಂದೂ ಕವಿಗಳಿಗೂ ಹಿಂದೂ ಚಿತ್ರಕಾರರಿಗೂ ಅಮೋಘವಾದ ರಾಜಾಶ್ರಯವು ದೊರೆತಿತ್ತು. ಇದು ಷಹಜಹಾನ್ ಚಕ್ರವರ್ತಿಯ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯನ್ನು ಹೊಂದಿತು; ಧನವೈಭವ ಕಲಾವೈಭವಗಳು ದಿಗಂತಗಳಿಗೆ ವ್ಯಾಪಿಸಿದವು. ಇವನ ಪ್ರಜೆಗಳಲ್ಲಿ ಧನಸಂಪತ್ತು ಶಾಂತಿಸಂಪತ್ತುಗಳೆರಡೂ ನೆಲೆಗೊಂಡವು. ಹಿಂದುಗಳಾದ ಇವನ ಪ್ರಜೆಗಳಲ್ಲಿ ಇವನ ಮಹಿಮೆ ಎಷ್ಟುಮಟ್ಟಿಗೆ ಇತ್ತೆಂದರೆ ಕೆಲವು ಬ್ರಾಹ್ಮಣರಾದವರು ಇವನ ದರ್ಶನವನ್ನು ಮಾಡದೆ ಊಟವನ್ನೇ ಮಾಡುತ್ತಿರಲಿಲ್ಲ. ಇವನು ಜನತೆಯಲ್ಲಿ ತೋರಿಸಿದ ಆದರದಿಂದ ವ್ಯವಸಾಯವೂ ಕೈಗಾರಿಕೆಯೂ ಅಭಿವೃದ್ಧಿಗೆ ಬಂದು ರಾಜ್ಯದ ಹುಟ್ಟುವಳಿಯು ಇಮ್ಮಡಿಸಿತು. ಷಹಜಹಾನನು ಬರಿಯ ವಿಲಾಸ ಪ್ರೇಮಿಯಾಗಿರಲಿಲ್ಲ; ಹಗಲೂ ಇರುಳೂ

[11] Mediaeval India, Stanley Lane-Poole p. 108.



ಷಹಜಹಾನ್

Reproduced from block loaned by
Messrs. Longmans, Green & Co.

ತನ್ನ ಪ್ರಜೆಗಳ ಕ್ಷೇಮಕ್ಕೋಸ್ಕರ ದುಡಿಯುತ್ತಲೂ ಇದ್ದನು. ಲಂಚಕೋರರೂ ಹಿಂಸಕರೂ ಆದ ರಾಜಭಟರುಗಳನ್ನು ಕಠಿಣವಾದ ಶಿಕ್ಷೆಗೆ ಈಡುಮಾಡುತ್ತಿದ್ದನು.[12]

ಇವನ ರಾಜ್ಯದಲ್ಲಿ ಸಂಚಾರಮಾಡಿದ ಅನೇಕ ಫರಂಗಿ ಯಾತ್ರಿಕರು ಇವನ ರಾಜ್ಯದ ವಿಸ್ತಾರವನ್ನೂ ಜನರ ಸಂಪತ್ತನ್ನೂ ನಾಗರಿಕತೆಯನ್ನೂ ಶ್ಲಾಘಿಸಿರುವರು. ಇವರಂತೆಯೇ "ರಾಯ್ ಬಡಾಮಾಲ್" ಎಂಬ ಹಿಂದೂ ಚರಿತ್ರಕಾರನು ಕೂಡ ಚಕ್ರವರ್ತಿಯ ಪ್ರಜಾಪ್ರೇಮ, ನ್ಯಾಯಪಕ್ಷಪಾತ, ಮುತ್ಸದ್ದಿತ್ವ-ಇವುಗಳನ್ನು ಅತಿ ಹೆಮ್ಮೆಯಿಂದ ಹೊಗಳಿರುವನು.[13] ಉರ್ದು ಮತ್ತು ಸಂಸ್ಕೃತಸಾಹಿತಿಗಳಲ್ಲೂ ಕಲಾಕೋವಿದರಲ್ಲೂ ಭೋಜರಾಜನಂತೆ ಇವನು ತೋರಿಸಿದ ಔದಾರ್ಯ ಇವನ ಕೀರ್ತಿಯನ್ನು ಶಾಶ್ವತವಾಗಿ ಸ್ಥಾಪಿಸಿರುವುದು. ಜಗನ್ನಾಥ ಕವಿ ಸಾರ್ವಭೌಮನು ಔದಾರ್ಯದಲ್ಲಿ ಷಹಜಹಾನನನ್ನು ಜಗದೀಶ್ವರನಿಗೆ ಹೋಲಿಸಿರುವುದು ಕೇವಲ ಅತಿಶಯೋಕ್ತಿಯಲ್ಲ. ಈ ಷಹಜಹಾನನು ಪ್ರಜಾಹಿಂಸಕನೆಂದೂ ವಿಲಾಸಪ್ರಿಯನೆಂದೂ, ಧರ್ಮಾಂಧನಾಗಿ ಹಿಂದುಗಳ ದೇವಸ್ಥಾನವನ್ನು ನಾಶಪಡಿಸಿದನೆಂದೂ ಕಂದಾಯಗಳನ್ನು ಹೆಚ್ಚಿಸಿ ರೈತರುಗಳನ್ನು ಪೀಡಿಸಿದನೆಂದೂ ಅನ್ಯಾಯವಾಗಿ ಗಳಿಸಿದ ಸಂಪತ್ತನ್ನು ದುಂದುಗಾರಿಕೆಯಿಂದ ಕಳೆದುಕೊಂಡನೆಂದೂ, ಮೊಗಲ್ ಸಾಮ್ರಾಜ್ಯದ ಅವನತಿಗೆ ಇವನೇ ಮೊದಲನೆಯ ಕಾರಣ ಎಂದೂ ಕೆಲವು ಅಭಿಪ್ರಾಯಗಳಿರುವುವು. ಇವುಗಳು ನಿರಾಧಾರವಾದುವೆಂದು ಒತ್ತಿಒತ್ತಿ ಹೇಳಬಹುದು. ಪಾಶ್ಚಾತ್ಯ ಯಾತ್ರಿಕರ ಹೇಳಿಕೆಗಳೇ

---

[12] Mediaeval India, Stanley Lane-Poole p. 110.
[13] Ibid p. 110.

ಈ ತಪ್ಪು ಅಭಿಪ್ರಾಯಕ್ಕೆ ಮೂಲಕಾರಣ.[14]

ಔರಂಗಜೇಬನ ರಾಜ್ಯವ್ಯವಹಾರವು ಭಿನ್ನಾಭಿಪ್ರಾಯಗಳಿಗೆ ಗುರಿಯಾಗಿವೆ. ಮುಸಲ್ಮಾನರು ಇವನನ್ನು ಒಬ್ಬ "ಪೀರ್" ಅಂದರೆ "ಸಂತ"ನೆಂದು ತಿಳಿದಿರುವರು. ಕೆಲವು ಹಿಂದುಗಳು ಇವನನ್ನು ಆಸುರೀ ಸ್ವಭಾವದವನು ಎಂದು ತಿಳಿದಿರುವರು. ಇವನಿಗೆ ಹಿಂದುಗಳ ಮೇಲೆ ವೈಷಮ್ಯವಿದ್ದುದೇನೋ ನಿಜ. ಆದರೆ ಅದು ಅವನ ಮನಸ್ಸಿನಲ್ಲಿ ಏಕಾಏಕಿ ಹುಟ್ಟಲಿಲ್ಲ. ಪಟ್ಟಾಭಿಷಿಕ್ತನಾಗಿ ಹತ್ತು ವರ್ಷಕಾಲ ಹಿಂದುಗಳನ್ನು ರಕ್ಷಣೆ ಮಾಡಲು ಪ್ರಯತ್ನಪಟ್ಟನು. ಕಾಶಿ ದೇವಾಲಯದ ಅರ್ಚಕರಿಗೆ ಅವರ ಹಕ್ಕುಬಾಧ್ಯತೆಗಳನ್ನು ಸುರಕ್ಷಿತವಾಗಿ ಪಾಲಿಸುವೆನೆಂದು ಒಂದು ಅಭಯಪತ್ರವನ್ನು ಕೊಟ್ಟನು. ಕಾಲಕ್ರಮದಲ್ಲಿ ಮತ ಬೋಧಕರ ಕೈಯ ಸೂತ್ರದ ಬೊಂಬೆಯಾದನು. ಹಿಂದುಗಳ ಮೇಲೆ "ಜೆಸಿಯಾ" ತಲೆಗಂದಾಯವನ್ನು ಹಾಕಿದನು. ಇಸ್ಲಾಮಿ ರಾಜನೀತಿಯಲ್ಲಿ 'ಜಿಮ್ಮಿ'ಗಳ ಪುರಾತನ ದೇವಾಲಯಗಳನ್ನು ಸುರಕ್ಷಿತವಾಗಿ ಇಡಬಹುದು; ಆದರೆ ಹೊಸ ದೇವಸ್ಥಾನಗಳ ಸ್ಥಾಪನೆಗೆ ಅವಕಾಶವಿಲ್ಲ. ಈ ನೀತಿಯನ್ನು ಅನುಸರಿಸಿ ಔರಂಗಜೇಬನು ಅರ್ವಾಚೀನವಾದ ದೇವಸ್ಥಾನಗಳನ್ನು ನೆಲ ಸಮಮಾಡಬೇಕೆಂದು ಆಜ್ಞೆ ಇತ್ತನು. ಇದೊಂದು ಸುಸಮಯ ವೆಂದು ತಿಳಿದು ಅಶಿಕ್ಷಿತರಾದ ಇವನ ಅಧಿಕಾರಿಗಳು ಹಿಂದಿನವು ಇಂದಿನವು ಎಂದು ಎಣಿಸದೆ ಎಲ್ಲಾ ದೇವಸ್ಥಾನಗಳನ್ನೂ ಲೂಟಿ ಮಾಡಿ ತಮ್ಮ ಚಕ್ರವರ್ತಿಯನ್ನು ಅಪಕೀರ್ತಿಗೆ ಗುರಿಮಾಡಿದರು; ರಾಜ್ಯದಲ್ಲಿ ದೊಡ್ಡ ಕ್ರಾಂತಿಯ ಬೀಜವನ್ನು ಬಿತ್ತಿದರು.

---

[14] History of Muslim Rule in India by Isvari Prasad p. 573.

ಔರಂಗಜೇಬನಿಗೆ ಹಿಂದುಗಳಲ್ಲಿ ವ್ಯಕ್ತಿಶಃ ದ್ವೇಷವಿರಲಿಲ್ಲ. ರಾಜಪುತ್ರ ರಾಜರು ಮೊದಲಿನಂತೆ ಇವನ ಸೈನ್ಯದಲ್ಲಿ ದುಡಿದರು; ಇವನಿಗೋಸ್ಕರ ಕಾಬೂಲ್ ಪ್ರಾಂತದಲ್ಲಿಯೂ ಡೆಕ್ಕನ್ ಪ್ರಾಂತದಲ್ಲಿಯೂ ತಮ್ಮ ಜೀವಗಳನ್ನು ಅರ್ಪಿಸಿದರು. ಇವನ ಖಾಸ ಕಾರ್ಯದರ್ಶಿ "ವಾಲೀರಾಮ್" ಎಂಬ ಹಿಂದು; ಇವನ ಹಣಕಾಸಿನ ಮಂತ್ರಿಗಳಲ್ಲಿ ಒಬ್ಬನಾದ ರಘುನಂದನ ರಾಯ್ ಎಂಬವನೂ ಹಿಂದುವೇ.[15] ಈ ಚಕ್ರವರ್ತಿಯು ಕೇವಲ ಸಂಕುಚಿತ ಮನಸ್ಕನಾಗಿ ಸ್ವಂತ ಮಕ್ಕಳನ್ನು ಕೂಡ ನಂಬಲಿಲ್ಲ. ಆದುದರಿಂದಲೇ ಇವನ ತನುಜರೂ ಇವನ ಮುಸಲ್‌ಮಾನ್ ಸರದಾರರೂ ಇವನ ಮೇಲೆ ದಂಗೆ ಎದ್ದು ರಾಜ್ಯವನ್ನು ಚೂರು ಚೂರಾಗಿ ಮಾಡಿದರು. ಇವರು ಹಾಕಿದ ಮೇಲ್ಪಂಕ್ತಿಯನ್ನು ರಾಜಪುತ್ರರೂ ಮರಾಠರೂ ಸಿಕ್ಕರೂ ಅನುಸರಿಸಿದರು. ಇವರ ದಂಗೆಯು ಸ್ವರಾಜ್ಯ ಸ್ಥಾಪನೆಗೋಸ್ಕರ ಕೈಗೊಂಡದ್ದು; ಮತವೈಷಮ್ಯದಿಂದ ಉದಿಸಿದುದು ಎಂಬುದು ನಿರಾಧಾರವಾದ ತಪ್ಪಿನ ಅಭಿಪ್ರಾಯ. ಮುಸಲ್ಮಾನರೂ ದಂಗೆಯೆದ್ದರು. ಹಿಂದುಗಳೊಬ್ಬರೇ ಔರಂಗಜೇಬನ ರಾಜ್ಯವನ್ನು ಹಾಳುಮಾಡಿದರೆಂಬುದು ತಪ್ಪಭಿಪ್ರಾಯ.

ಮಹಾರಾಷ್ಟ್ರರು ಹೂಡಿದ ಯುದ್ಧಗಳು ಅವರು ತಮ್ಮ ಆತ್ಮಗೌರವವನ್ನು ಕಾಪಾಡಿಕೊಳ್ಳಲು ಮಾಡಿದ ಉದ್ಯಮಗಳು. ಪ್ರತಿಯೊಂದು ಜನಾಂಗವೂ ತನ್ನ ರಾಜ್ಯಸೂತ್ರವನ್ನು ತನ್ನ ಕೈಯಲ್ಲಿ ಇರಿಸಿಕೊಳ್ಳಲು ಅಪೇಕ್ಷಿಸುವುದು ಸಹಜ. ಚಾಲುಕ್ಯಚಕ್ರವರ್ತಿಯಾದ ಪುಲಿಕೇಶಿಯು ಉತ್ತರಾಪಥೇಶ್ವರ

---

[15] Muslim University Journal, Oct. 1940. pp. 65-67.

ನಾದ ಹರ್ಷನನ್ನು ಎದುರಿಸಿ ಸೋಲಿಸಿದಂತೆ ದಾಕ್ಷಿಣಾತ್ಯರಾದ ಮಹಾರಾಷ್ಟ್ರರೂ ದಿಲ್ಲೀಶ್ವರನನ್ನು ಪ್ರತಿಭಟಿಸಿ ಸ್ವರಾಜ್ಯವನ್ನು ಸ್ಥಾಪಿಸಿದರು. ಷಹಜಿರಾಜನು ಮುಸಲ್ಮಾನರ ನೆರಳಿನಲ್ಲಿ ಬೆಳೆದವನು. ಅಹಮದ್‌ನಗರ ರಾಜ್ಯವನ್ನು ಪುನರುಜ್ಜೀವನಗೊಳಿಸಲು ಅವನು ಮಾಡಿದ ಸಾಹಸ ಕಾರ್ಯಗಳು ಮೊಗಲ್ ಬಾದಶಹನಿಗೆ ತಲೆನೋವನ್ನುಂಟುಮಾಡಿದುವು. ಬಿಜಾಪುರದ ಆದಿಲ್‌ಷಾಹಿ ರಾಜ್ಯವನ್ನು ಪುಷ್ಟಿಗೊಳಿಸಿ ದೃಢೀಕರಿಸಿದವನು ಷಾಹಜಿ ಭೌನ್ಸ್ಲೆ. ಅವನ ಜನ್ಮವು ಒಬ್ಬ ಮುಸಲ್ಮಾನ್ ಸಂತನಾದ ಷಹಾಷರೀಫಜಿಯ ವರಪ್ರಸಾದದಿಂದ ಉಂಟಾದುದು.

ಜಗದ್ವಿಖ್ಯಾತನಾದ ಶಿವಾಜಿ ಛತ್ರಪತಿಯು ದಿಗ್ವಿಜಯ ಕಾಲದಲ್ಲಿ ಮುಸಲ್ಮಾನ ಮಸೀದಿಗಳಿಗೆ ಹಿಂದುಗಳು ಗೌರವವನ್ನು ತೋರಿಸಬೇಕೆಂದು ಪ್ರಕಟಿಸಿದನು.[16] ಹಾಗೆಯೇ ಅವರ ಧರ್ಮಗ್ರಂಥವಾದ ಕೊರಾನನ್ನು ಗೌರವದಿಂದ ನೋಡುವಂತೆ ತನ್ನ ಸೈನಿಕರಿಗೆ ಕಟ್ಟಾಜ್ಞೆಯನ್ನು ಮಾಡಿದನು. ಇವನು ಅನೇಕ ಮುಸಲ್ಮಾನ ಸರದಾರರುಗಳನ್ನು ತನ್ನ ರಾಜ್ಯ ಕಾರ್ಯದಲ್ಲಿ ಸಹಾಯಕರನ್ನಾಗಿ ಮಾಡಿಕೊಂಡನು. ಶಿವಾಜಿ ದಂಗೆ ಎದ್ದುದು ಕೇವಲ "ರಾಜಕೀಯ" ಕಾರಣಗಳಿಂದ. ಅನ್ಯಮತದ್ವೇಷ ಅದಕ್ಕೆ ಕಾರಣವಲ್ಲ. ಇವನ ಮೇಲ್ಪಂಕ್ತಿಯನ್ನು ಇವನ ಅನುಯಾಯಿಗಳೂ ಅನುಸರಿಸುತ್ತಿದ್ದರು. ಸಾಹುಮಹಾರಾಜನಿಗಂತೂ ಔರಂಗಜೇಬನಲ್ಲಿಯೂ ಅವನ ವಂಶಿಕರಲ್ಲಿಯೂ ಅಸ್ಖಲಿತ ಭಕ್ತಿ ಇತ್ತು. ತನ್ನ ಬಿಡುಗಡೆಯಾದ ಬಳಿಕ ತಕ್ಷಣವೇ ಸಾಹುವು ಔರಂಗಜೇಬನ ಸಮಾಧಿಗೆ ಹೋಗಿ ಅವನ ಆತ್ಮಕ್ಕೆ ದೇವರು ಶಾಂತಿಯನ್ನು ಕೊಡಲಿ

[16] Mediaeval India by Stanley Lane-Poole, p. 128.

ಎಂದು ಪ್ರಾರ್ಥಿಸಿ, ಚಕ್ರವರ್ತಿಯಲ್ಲಿ ತನಗಿದ್ದ ಗೌರವವನ್ನು ವ್ಯಕ್ತಗೊಳಿಸಿದನು. ಇದೇ ರೀತಿಯಾಗಿ ದಿಲ್ಲೀಶ್ವರನಲ್ಲಿ ಗೌರವವನ್ನು ತೋರಿಸುವಂತೆ ತನ್ನ ಪ್ರಧಾನರಾದ ಪೇಶ್ವೆಗಳನ್ನೂ ಒತ್ತಾಯಪಡಿಸುತ್ತಿದ್ದನು.

"ಭಟ್ಟ" ಮನೆತನದ (ಪೇಶ್ವಾಯಿಯ) ಬೆಳವಣಿಗೆಯು ಮೊಗಲ್ ಸಾಮ್ರಾಜ್ಯದ ಸಹಾಯದಿಂದಲೇ ಆದದ್ದು. ದಿಲ್ಲಿಯಲ್ಲಿ ನಡೆಯುತ್ತಿದ್ದ ಸುಲಿಗೆ ಕೊಲೆಗಳನ್ನು ತಗ್ಗಿಸಲು ಅಸಮರ್ಥರಾದ ಡಿಲ್ಲಿ ರಾಜರು ಬಾಲಾಜಿ ವಿಶ್ವನಾಥ್‌ಭಟ್ಟನ ಸಹಾಯವನ್ನು ಪಡೆದು ಶಾಂತಿಸ್ಥಾಪನೆ ಮಾಡಿದರು. ತಮ್ಮ ಕೃತಜ್ಞತೆಯ ಚಿಹ್ನೆಯಾಗಿ ದಕ್ಷಿಣದಲ್ಲಿ "ಚೌತಾಯಿ" ಯನ್ನು ವಸೂಲ್ಮಾಡಲು ದಿಲ್ಲೀಶ್ವರನು ಭಟ್ಟನಿಗೆ ಒಂದು 'ಫರಮಾ' ದಯಪಾಲಿಸಿದನು. ಇದರಂತೆ ಅನೇಕಾವರ್ತಿ ದಿಲ್ಲಿಯ ಮೇಲೆ ದಂಡೆತ್ತಿಬರುತ್ತಿದ್ದ ಸುಬೇದಾರರ ಪುಂಡಡಗಿಸಿದವರು ಪೇಶ್ವಾಯಿಗಳು. ನಾದಿರ್‌ಷಹನು ದಂಡೆತ್ತಿಬಂದಾಗ ಮೊದಲನೆಯ ಬಾಜೀರಾಯನು ಬರೆದ ಒಂದು ಪತ್ರದಲ್ಲಿ ಅವನಿಗೆ ಮೊಗಲ್ ಸಾಮ್ರಾಜ್ಯದ ವಿಷಯವಾಗಿ ಇದ್ದ ಪ್ರೀತಿಗೌರವಗಳನ್ನು ವ್ಯಕ್ತಪಡಿಸಿರುವನು.[17] "ಈ ವಿಷಯದಲ್ಲಿ ಹಿಂದೂ ಮುಸಲ್ಮಾನರು ಭಿನ್ನಾಭಿಪ್ರಾಯಗಳನ್ನು ತೋರಿಸುವುದು ಸೂಕ್ತವಲ್ಲ. ಭಾರತಭೂಮಿಯು ಎರಡು ಪಂಗಡದವರಿಗೂ ಮಾತೃಸ್ಥಾನ. ಮೊಗಲ್ ಚಕ್ರವರ್ತಿಯಲ್ಲಿ ಸರ್ವರೂ ಪೂಜ್ಯಭಾವವನ್ನು ತೋರಿಸುವುದು ನಮ್ಮ ಕರ್ತವ್ಯ. ಅದರ ಗೌರವಕ್ಕೆ ಕುಂದುಬಾರದಂತೆ ನಡೆಯುವುದು ನಮಗೆ ಶ್ರೇಯಸ್ಕರ." ಈ ಪತ್ರದಿಂದ ಬ್ರಾಹ್ಮಣ ಮನೆತನದ ರಾಜರಿಗೆ ಮುಸ

[17] Muslim University Journal, Oct. 1940, p. 73.

ಲ್ಮಾನ್ ಚಕ್ರವರ್ತಿಗಳಲ್ಲಿ ಸ್ವಲ್ಪವೂ ವೈಷಮ್ಯವಿರಲಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದು.

ಪಾಣಿಪಟ್ ಸಂಗ್ರಾಮವು ಕೂಡ ಕೇವಲ ಮತದ್ವಂದ್ವಗಳ ಘರ್ಷಣವಲ್ಲ; ಹಿಂದುಸ್ಥಾನದ ರಾಜ್ಯಲಕ್ಷ್ಮಿಯನ್ನು ಪಡೆಯಲು ಶೂರರಾದ ಮಹಾರಾಷ್ಟ್ರದವರಿಗೂ ಅನ್ಯದೇಶೀಯರಾದ ಆಫಘನರಿಗೂ ಉಂಟಾದ ಪ್ರತಿಸ್ಪರ್ಧೆ. ಮಹಾರಾಷ್ಟ್ರೀಯರ ಸೈನ್ಯದಲ್ಲಿ ಮುಸಲ್ಮಾನರಾದ ಇಬ್ರಾಹಿಂಖಾನ್ ಗಾರಡಿಯೂ ಅವನ ಅನುಯಾಯಿಗಳೂ ಹಿಂದುಗಳಿಗೆ ಬೆಂಬಲರಾಗಿದ್ದರು ಎಂಬುದನ್ನು ಮರೆಯಬಾರದು. ಇಬ್ರಾಹಿಂಖಾನನು ತೋರಿಸಿದ ಸ್ವಾಮಿಭಕ್ತಿ ನೈಜವಾದದ್ದು. ಅನ್ನ ಆಹಾರಗಳಿಲ್ಲದೆ ಖಾನನು ಯುದ್ಧಮಾಡುತ್ತಲೇ ತನ್ನ ಪ್ರಾಣವನ್ನು ಬಲಿಕೊಟ್ಟನು. ಈ ಸಂಗ್ರಾಮದಲ್ಲಿ ಹಿಂದೂ ಮುಸಲ್ಮಾನರ ವೈಷಮ್ಯವನ್ನು ಹುಡುಕುವುದು ಅಸಂಬದ್ಧ ಪ್ರಲಾಪ.

ಮಹಾದಾಜಿ ಸಿಂಧ್ಯನು ಅನೇಕ ಮುಸಲ್ಮಾನ ಸರದಾರರ ಸಹಾಯದಿಂದ ತನ್ನ ರಾಜ್ಯವನ್ನೂ ಕೀರ್ತಿಯನ್ನೂ ವಿಸ್ತರಿಸಿದನು. ಈ ಮುಸಲ್ಮಾನ್ ಸೈನಿಕರ ಮನಸ್ಸನ್ನು ಆಕರ್ಷಣೆ ಮಾಡಲೋಸುಗ ಅವರ ಹಬ್ಬಗಳಲ್ಲಿ ತಾನೂ ಭಾಗಿಯಾದನು. ಈಗಲೂ ಸಿಂಧ್ಯ ಮಹಾರಾಜರು ಮೊಹರಂ ಮೆರವಣಿಗೆಯಲ್ಲಿ ರಾಜಮರ್ಯಾದೆಯೊಡನೆ ಸೇರಿ ಮುಸಲ್ಮಾನರಲ್ಲಿ ತಮಗಿರುವ ಗೌರವವನ್ನು ಸೂಚಿಸುವರು. ಸಿಪಾಯಿ ದಂಗೆಯಲ್ಲಿ ಭಾರತೀಯರ ಮುಖ್ಯ ಉದ್ದೇಶವು ಮೊಗಲರ ಸಾಮ್ರಾಜ್ಯವನ್ನು ಪುನರುದ್ಧಾರ ಮಾಡಬೇಕೆಂಬುದೇ. ಈ ಉದ್ಯಮದಲ್ಲಿ ಹಿಂದೂ ಮುಸಲ್ಮಾನರಿಬ್ಬರೂ ಸಮವಾದ ಭಾಗವನ್ನು ವಹಿಸಿದ್ದರು. ಆಗಿನ ಕಾಲದ ಅನೇಕ ಇಂಗ್ಲಿಷ್ ಯೋಧರ ಬರಹಗಳನ್ನು

ಪರಿಶೀಲಿಸಿದರೆ ಈ ಉದ್ಯಮದಲ್ಲಿ ಮುಸಲ್ಮಾನರೇ ಅಧಿಕವಾದ ಭಾಗವನ್ನು ವಹಿಸಿ ದಂಗೆಯನ್ನು ವಿಸ್ತರಿಸಿದರೆಂದು ಕಂಡು ಬರುವುದು.[18]

---

# ಉಪನ್ಯಾಸ ೨

## ಹಿಂದೂ ಮಹಮ್ಮದೀಯ ಸಂಸ್ಕೃತಿ

ಪುರಾಣ ಕಾಲದಿಂದಲೂ ಈ ಭಾರತ ಭೂಮಿಯು ವೇದಾಂತ ಮೀಮಾಂಸಗಳಿಗೂ ಕಲಾಕೌಶಲ್ಯಗಳಿಗೂ ಮಾತೃ ಭೂಮಿಯೆಂದು ಇಡೀ ಜಗತ್ತಿನಲ್ಲೆಲ್ಲಾ ಖ್ಯಾತಿಯನ್ನು ಪಡೆದಿತ್ತು. ಅಲೆಕ್ಸಾಂಡರ್ ಮತ್ತು ಅರಿಸ್ಟಾಟಲ್ ಇಬ್ಬರೂ ಈ ದೇಶದ ತತ್ವಜ್ಞರ ಸಂಭಾಷಣೆಯನ್ನು ಅಪೇಕ್ಷಿಸುತ್ತಿದ್ದರು. ಅನೇಕ ಗ್ರೀಕ್ ತತ್ವಜ್ಞರು ಭಾರತ ದೇಶಕ್ಕೆ ಬಂದು ತಮ್ಮ ಜ್ಞಾನ ತೃಷೆಯನ್ನು ತೀರಿಸಿಕೊಳ್ಳುತ್ತಿದ್ದರೆಂದು ಸೂಚನೆಗಳಿವೆ.

"ಕಲೀಫ್ ಅಲ್ ರಷೀದ್" ಎಂಬ ಪರ್ಷಿಯಾ ಚಕ್ರವರ್ತಿಯು ಭಾರತೀಯ ವಿದ್ವಾಂಸರನ್ನು ಆಮಂತ್ರಣ ಮಾಡಿ ಅವರಿಗೆ ವಿಶೇಷ ಗೌರವವನ್ನು ನೀಡಿದನು. ಈ ಪಂಡಿತರ ಸಹಾಯದಿಂದ ಪ್ರಖ್ಯಾತವಾದ ಭಾರತೀಯ ಗ್ರಂಥಗಳನ್ನು ಪರ್ಷಿಯಾ

---

[18] Letters written during the Mutiny, by Lord Roberts. p. 30 ; 65 ; 98 ; 98 ;

ಭಾಷೆಯಲ್ಲಿ ತರ್ಜುಮೆ ಮಾಡಿಸಿ ಭಾರತೀಯರ ಮೇಲ್ಮೆಯನ್ನೂ ಜ್ಞಾನವನ್ನೂ ತನ್ನ ರಾಜ್ಯದಲ್ಲಿ ಪಸರಿಸಿದನು. ವಿಗ್ರಹಧ್ವಂಸಕನಾದ ಘಜಿನೀ ಮುಹಮೂದನು ಸಮರ ಕೋಲಾಹಲದಲ್ಲಿ ಕೂಡ ಭಾರತೀಯ ಕಲಾವೈಶಿಷ್ಟ್ಯವನ್ನು ಕಂಡು ಬೆರಗಾದನು. ಅಭಿಜ್ಞರಾದ ಶ್ರೇಷ್ಠ ತರದ ಶಿಲ್ಪಿಗಳನ್ನು ಆರಿಸಿ ತನ್ನ ದೇಶಕ್ಕೆ ಕಳುಹಿಸಿದನು. ಭಾರತದೇಶದಂತೆ ತನ್ನ ದೇಶವು ಕಲೆಯ ಬೀಡು ಆಗಬೇಕೆಂಬುದೇ ಅವನ ಆಶಯ.

ಭಾರತದೇಶದ ಅಮೃತಶಿಲೆಯಿಂದ ಮಶೀದಿಗಳೂ ಅರಮನೆಗಳೂ ಘಜ್ನಿಯಲ್ಲಿ ಕಟ್ಟಲ್ಪಟ್ಟವು. 500 ವರ್ಷಗಳು ಕಳೆದರೂ ಹಿಂದುದೇಶದ ಪಾರಿವಾಳಗಳು, ನಾಗಮಣಿಗಳು ಘಜ್ನಿಯಲ್ಲಿ ಕಂಡುಬಂದವು ಎಂದು "ಫೆರಿಸ್ಟನು" ಬರೆದಿರುವನು.

ಅವನ ಆಸ್ಥಾನದ ಪಂಡಿತನಾದ 'ಆಲ್‌ಬರೋನಿ'ಯು ಹಿಂದುಗಳ ಶಾಸ್ತ್ರಗಳನ್ನು ಕೂಲಂಕಷವಾಗಿ ಓದಿ ತನ್ನ ಮೆಚ್ಚುಗೆಯನ್ನು "ತಾರಿಖ್ ಇ ಇಂಡ್" ಎಂಬ ಪುಸ್ತಕದಲ್ಲಿ ಹೀಗೆ ಹೊರಪಡಿಸಿರುವನು: "ಹಿಂದುಗಳೆಲ್ಲರೂ ಏಕದೇವತಾರಾಧಕರು. ನಮ್ಮಂತೆ ಅವರೂ ದೇವರು ಅದ್ವಿತೀಯನು, ಸನಾತನನು, ನಿರ್ವಿಕಾರನು, ನಿರುಪಮನು ಎಂದಿರುವರು. ಒಂದೇ ದೇವರು ಅನೇಕರೂಪಗಳಿಂದಲೂ ಹೆಸರುಗಳಿಂದಲೂ ಪೂಜೆಯನ್ನು ಅಂಗೀಕರಿಸುವನು. ಪಾಮರರು ಮಾತ್ರ ತಮ್ಮ ಸಾಧನೆಗಾಗಿ ವಿಗ್ರಹಗಳನ್ನು ಆರಾಧಿಸುವರು. ಪಂಡಿತರು ನಿರ್ವಿಕಾರ ದೇವರನ್ನೇ ಪೂಜಿಸುವರು."[19] ಹದಿಮೂರನೆಯ ಶತಮಾನದ "ಅಮೀರ್ ಖುಸ್ರು" ಎಂಬ ಕವಿ ಸಾರ್ವಭೌಮನು ಹಿಂದುಗಳ ವಿಷಯವಾಗಿ ತನ್ನ ಪೂಜ್ಯಭಾವನೆಯನ್ನು ತನ್ನ

[19] Tarik-I-Hind by Al Biruni, p. 31.

ಗ್ರಂಥಗಳಲ್ಲಿ ತೋರ್ಪಡಿಸಿರುವನು.[20] ಈ ಭಾರತ ದೇಶದ ಮೇಲೂ ಅದರ ಶ್ರೇಷ್ಠತರವಾದ ಸಂಸ್ಕೃತಿಯ ಮೇಲೂ ಆವನಿಗೆ ಅಗಾಧವಾದ ಪ್ರೇಮ ಗೌರವಗಳಿದ್ದವು. "ಅಸದೃಶವಾದ ಅಮೋಘವಾದ ಜ್ಞಾನಭಂಡಾರವು ಈ ಭಾರತಭೂಮಿಯಲ್ಲಿಯೇ ನೆಲಸಿರುವುದು. ಜಗತ್ತಿನಲ್ಲಿ ಪ್ರಚುರವಲ್ಲಿರುವ ವಿಧವಿಧವಾದ ತತ್ವಮೀಮಾಂಸಗಳೆಲ್ಲವನ್ನೂ ಈ ಭಾರತದಲ್ಲಿ ಕಾಣಬಹುದು. ತರ್ಕ, ಜ್ಯೋತಿಷ್ಯ, ಭೌತಶಾಸ್ತ್ರ, ಕಾಲಜ್ಞಾನ, ಗಣಿತ—ಇವುಗಳಲ್ಲಿ ಭಾರತೀಯರು ನಿಸ್ಸೀಮಪಂಡಿತರು. ಇವರು ಇಸ್ಲಾಮ ಪಂಗಡದವರಲ್ಲದಿದ್ದರೂ ಇವರ ಧರ್ಮದ ಅನೇಕವಾದ ಮುಖ್ಯಾಂಶಗಳು ನಮ್ಮ ಇಸ್ಲಾಮಿ ತತ್ವವನ್ನು ಹೋಲುತ್ತವೆ. ನಮ್ಮಂತೆಯೇ ಇವರು ದೇವರು ಒಬ್ಬನೇ ಎನ್ನುವ ಅದ್ವೈತಿಗಳು. ಆ ದೇವನು ಸನಾತನನು, ಸಚ್ಚಿದಾನಂದ ಮೂರ್ತಿಯೆಂದು ಭಾವಿಸುವರು. ಕಲ್ಲು, ಮರ, ಪ್ರತಿಮೆಗಳನ್ನು ಪೂಜೆಮಾಡಿದರೂ ಅವುಗಳೇ ದೇವರೆಂದು ತಪ್ಪು ತಿಳಿವಳಿಕೆ ಅವರಲ್ಲಿ ಇಲ್ಲ. ಇವುಗಳು ದೇವರ ಸೃಷ್ಟಿ ಪ್ರತಿಬಿಂಬಗಳೆಂದು ಗೌರವಿಸುವರು." ಮತ್ತೆ ಭಾರತದೇಶದ ವೈಶಿಷ್ಟ್ಯದ ವಿಚಾರವಾಗಿ ಹತ್ತು ಕಾರಣಗಳನ್ನು ಕೊಟ್ಟಿರುವನು: (1) "ಜ್ಞಾನವೂ ವಿದ್ಯೆಯೂ ಭಾರತೀಯರಲ್ಲಿಯೇ ವಿಶೇಷವಾಗಿ ನೆಲಸಿರುವುವು. (2) ಈ ಭೂಮಂಡಲದ ಭಾಷೆಗಳೆಲ್ಲವನ್ನೂ ಭಾರತೀಯರು ತಿಳಿದಿರುವರು. (3) ಅನ್ಯದೇಶಗಳಿಂದ ವಿದ್ಯಾರ್ಥಿಗಳು ಇಲ್ಲಿಗೆ ಬಂದು ಪಾಂಡಿತ್ಯವನ್ನು ಆರ್ಜನೆಮಾಡುವರು. ಆದರೆ ಬ್ರಾಹ್ಮಣರು ಮಾತ್ರ ಅನ್ಯದೇಶಗಳಿಗೆ ಹೋಗಬೇಕಾ

---

[20] Life and Works of Amir Khusru by M. W Mirza p. 183-84 & 228.

ಗಿಲ್ಲ. ಅವರು ಸರ್ವಜ್ಞರು. ಬ್ಯಾಕ್ಟ್ರಿಯ ದೇಶದ ಅಬೂ ಮಷಾದ್ (Abu Mashad) ಎಂಬ ಜ್ಯೋತಿಷ್ಯ ವಿದ್ವಾಂಸನು ಕಾಶಿಗೆ ಬಂದು ಅಲ್ಲಿ ಹತ್ತು ವರ್ಷಗಳ ಕಾಲ ವ್ಯಾಸಂಗಮಾಡಿ ತನ್ನ ವಿದ್ಯೆಯನ್ನು ಪುಷ್ಟಿಗೊಳಿಸಿಕೊಂಡನು. (4) ಅಂಕಗಣಿತ, ರೇಖಾಗಣಿತಗಳು ಇಲ್ಲಿ ಹುಟ್ಟಿದವು. ಇವು ಬ್ರಾಹ್ಮಣರಿಂದ ಸೃಷ್ಟಿಸಲ್ಪಟ್ಟವು. (5) ಅಮೋಘವಾದ ನೀತಿಪ್ರದವಾದ ಕರಟಕ ದಮನಕ ಎಂಬ ಪಂಚತಂತ್ರ ನೀತಿಸಾರವು ಇಲ್ಲಿಯೇ ಹುಟ್ಟಿತು. ಈಗಾಗಲೆ ಇದು ಅನೇಕ ಭಾಷೆಗಳಿಗೆ ಭಾಷಾಂತರವಾಗಿ ಪ್ರಸಿದ್ಧಿಗೊಂಡಿದೆ. (6) ಚತುರಂಗವು ಈ ದೇಶದಲ್ಲಿ ಹುಟ್ಟಿದ ಆಟ. (7) ಪಂಚತಂತ್ರ ಮತ್ತು ಚತುರಂಗ ಇಡಿ ಜಗತ್ತಿನಲ್ಲೆಲ್ಲಾ ಪ್ರಚಾರವಾಗಿರುವುವು. (8) ಇವರ ಸಂಗೀತ ಶಾಸ್ತ್ರವಂತೂ ಅನ್ಯದೇಶ ಸಂಗೀತಗಳನ್ನು ತುಚ್ಛೀಕರಿಸಿರುವುದು. ಈ ಸಂಗೀತವು ಮಾನವನ ಮನಸ್ಸನ್ನೂ ಜೀವನವನ್ನೂ ಮೋಹಿಸಿ ಸೂರೆಗೊಳ್ಳುವುದು. ಅನ್ಯದೇಶೀಯ ಗವಾಯಿಗಳು ಮೂವತ್ತು ವರ್ಷಗಳಕಾಲ ಶ್ರಮಪಟ್ಟರೂ ಒಂದು ರಾಗವನ್ನಾದರೂ ಸರಿಯಾಗಿ ಹಾಡಲು ಬಾರದವರು. (9) ಈ ಸಂಗೀತವು ಮನುಷ್ಯನನ್ನು ಮಾತ್ರವಲ್ಲದೆ ಮೃಗಗಳನ್ನೂ ಪೈಮರೆಸುವುದು. ಜಿಂಕೆಗಳನ್ನೂ ಆನೆಗಳನ್ನೂ ಸಂಗೀತದಿಂದ ನಿಶ್ಚಲವಾಗಿ ಮಾಡಿ ಅವುಗಳನ್ನು ಕಾಡಿನಲ್ಲಿ ಹಿಡಿಯುವರು. (10) 'ಅಮೀರ್ ಖುಸ್ರು' ಎಂಬ ಕವಿಶ್ರೇಷ್ಠನಿಗೆ ಭಾರತವು ಮಾತೃಭೂಮಿಯು. ಈ ಕಾರಣಗಳಿಂದಲೇ ಭರತಖಂಡವು ಜಗತ್ತಿಗೆಲ್ಲಾ ಒಂದು ಭೂಷಣಪ್ರಾಯವಾಗಿರುವುದು." ಇಂತು ಹೆಮ್ಮೆಯಿಂದ ತನ್ನ ಮಾತೃಭೂಮಿಯನ್ನು ಕೊಂಡಾಡಿರುವನು.

ಈ ರೀತಿಯಾಗಿ ಮುಸಲ್ಮಾನರ ರಾಜ್ಯೋದಯ ಕಾಲದಲ್ಲಿಯೇ ಸಮರ ಕೋಲಾಹಲದಲ್ಲಿ ಉಂಟಾಗಿರುವ ಪರಸ್ಪರ ಅಸೂಯೆ ವೈಷಮ್ಯಗಳು ತೇಲಿಹೋಗಿ ಹಿಂದುಮುಸಲ್ಮಾನರಲ್ಲಿ ಪರಸ್ಪರ ಸೌಹಾರ್ದವೂ, ಪೂಜ್ಯಭಾವವೂ ಉಂಟಾದವು. ಇದರ ಪರಿಣಾಮವಾಗಿ ಭಾರತಭೂಮಿಯು ಸರ್ವತೋಮುಖವಾಗಿ ಪ್ರಗತಿಯನ್ನು ಹೊಂದಿತು. ಆರ್ಥಿಕ ಸಾಮಾಜಿಕ ಸಂಪತ್ತುಗಳು ವೃದ್ಧಿಗೊಂಡವು.

## ರಾಜ್ಯಾಂಗ ಪದ್ಧತಿ

ವಿಜಯಶಾಲಿಗಳಾದ ಮುಸಲ್ಮಾನ ಚಕ್ರವರ್ತಿಗಳು ಪದಚ್ಯುತರಾದ ಹಿಂದುಗಳನ್ನು ಗುಲಾಮರೆಂದೂ, ಕಾಫರರೆಂದೂ ಅವಮಾನಪಡಿಸದೆ ಅವರುಗಳಿಗೆ ಒಂದು ಗೌರವವಾದ ಸ್ಥಾನವನ್ನು ಕೊಟ್ಟರು. ಈ ವಿದೇಶೀಯರು ಭಾರತೀಯರಿಗೆ ರಾಜ್ಯಭಾರ ಕ್ರಮದಲ್ಲಿ ಅತಿ ಉನ್ನತವಾದ ಪದವಿಗಳನ್ನು ದಯಪಾಲಿಸಿದರು. ಈ ಔದಾರ್ಯನೀತಿಯು ಇತರ ದೇಶೀಯರಲ್ಲಿ ಕಂಡುಬರುವುದು ವಿರಳ. ಮೊಟ್ಟಮೊದಲಿನ ಮಹಮುದ್ ಬಿನ್ ಕಾಸಿಮನು ತನ್ನ ಶತ್ರುಗಳೂ ಪರಾಕ್ರಮಶಾಲಿಗಳೂ ಆದ ಭಾರತೀಯರನ್ನು ಮನ್ನಿಸಿ ಅವರ ದ್ವೇಷಗಳನ್ನು ಮರೆತು, ಅವರ ಪೂರ್ವಪದ್ಧತಿ, ಧರ್ಮ, ನೀತಿಗಳಿಗೆ ಚ್ಯುತಿಬಾರದಂತೆ ರಕ್ಷಣೆ ಮಾಡುವುದಾಗಿ ಒಂದು ರಾಜಶಾಸನವನ್ನು ಪ್ರಕಟಿಸಿದನು. ರಾಜದ್ರೋಹಿಗಳಾದ ಬೌದ್ಧರನ್ನು ನಂಬಲು ಅನರ್ಹರೆಂದು ತಿರಸ್ಕರಿಸಿದನು. ಶೂರರಾದ ಬ್ರಾಹ್ಮಣರನ್ನೂ ಕ್ಷತ್ರಿಯರನ್ನೂ ಅವರವರ ಪೂರ್ವದ ಹುದ್ದೆಗಳಲ್ಲಿಯೇ ನೇಮಿಸಿದನು. ಯುದ್ಧ ಕೋಲಾಹಲದಲ್ಲಿ ಜೀರ್ಣವಾದ ದೇವಸ್ಥಾನಗಳನ್ನು ಸರಿಮಾ

ಡಲು ಅನುಮತಿಯನ್ನು ಕೊಟ್ಟನು. ದೇವಸ್ಥಾನಗಳಿಗೆ ಮತ್ತು ಬಡ ಬ್ರಾಹ್ಮಣರಿಗೆ ಮಾಸಾಶನಗಳನ್ನೂ, ಮಾನ್ಯಗಳನ್ನೂ ಕೊಟ್ಟು ಪೋಷಣೆ ಮಾಡಿದನು.[21] ಹಿಂದುಗಳು ವಿಧೇಯರಾಗಿ 'ಜೆಸಿಯಾ' ತೆರಿಗೆಯನ್ನು ಕೊಟ್ಟಲ್ಲಿ ಅವರುಗಳಿಗೆ ಅನ್ಯಥಾ ಯಾವ ತೊಂದರೆಯನ್ನೂ ಕೊಡಲಿಲ್ಲ. ಘಜ್ನಿ ಮಹಮುದನು ತನ್ನಲ್ಲಿ ಒಂದು ಹಿಂದೂ ಸೈನ್ಯವನ್ನು ಇಟ್ಟುಕೊಂಡಿದ್ದನೆಂದೂ ಅವರಿಗೆ ತನ್ನ ಪಟ್ಟಣದಲ್ಲಿ ಒಂದು ಸ್ಥಳವನ್ನು ಏರ್ಪಡಿಸಿ ಅವರ ಧರ್ಮಕ್ಕೂ ದೇವತೆಗಳ ಪೂಜೆಗೂ ಅನುಕೂಲಗಳನ್ನು ಅರ್ಪಣೆ ಮಾಡಿದನೆಂದು ಮೊದಲೇ ಉಲ್ಲೇಖಿಸಿದೆ. ಅಲ್ಲಾವುದೀನ್ನನು ಹಿಂದುಗಳನ್ನು ಅರೆದು ಹಾಕಲು ವಿಶೇಷ ಏರ್ಪಾಟುಗಳನ್ನು ಕೈಗೊಂಡನೆಂಬುದು ನಿರಾಧಾರವಾದ ದಂತಕಥೆ. ಅವನ ದಕ್ಷಿಣ ದೇಶದ ದಂಡಯಾತ್ರೆಯು ಐಶ್ವರ್ಯವನ್ನು ದೋಚಿಕೊಂಡು ಹೋಗಲು ಮಾಡಿದ ಸಾಹಸ ಕಾರ್ಯವೇ ಹೊರತು ಧರ್ಮನಾಶ ಮಾಡಬೇಕೆಂಬ ದುಷ್ಟ ಅಭಿಪ್ರಾಯದಿಂದ ಕೈಕೊಂಡುದಲ್ಲ. ಸೋತುಹೋದ ದೇವಗಿರಿಯ ರಾಜನಿಗೆ 'ರಾಯ್‌ರಾಯನ್' ಎಂದು ಬಿರುದನ್ನು ಕೊಟ್ಟು ಅತಿ ಗೌರವದಿಂದ ದೇವಗಿರಿಗೆ ವಾಪಸು ಕಳುಹಿಸಿದನು. ಮಹಮುದ್ ಬಿನ್ ತೊಗಲಕನ ವಿಷಯವಾಗಿ 'ಐಬಿನ್ ಬಟೂಟ' ಎಂಬ ಆಫ್ರಿಕ ದೇಶದ ಯಾತ್ರಿಕನು ಇಂತೆಂದು ಹೇಳಿರುವನು. "ಈ ಸುಲ್ತಾನನಿಗೆ ಮುಸಲ್ಮಾನರಿಗಿಂತ ಹಿಂದುಗಳಲ್ಲಿ ವಿಶೇಷಪ್ರೀತಿಯಿದೆ. ಅವರ ಯೋಗಿಗಳ ಜೊತೆಯಲ್ಲಿಯೇ ತನ್ನ ಕಾಲವನ್ನು ವ್ಯರ್ಥಹರಣ ಮಾಡುವನು. ಹಿಂದು ಸಾಮ್ರಾಜ್ಯವನ್ನು ಸ್ಥಾಪಿಸುವುದೇ ಮುಖ್ಯ ಧ್ಯೇಯ. ಆದುದ

---

[21] Preaching of Islam by T. W. Arnold, p. 272

ರಿಂದ ಮುಸಲ್ಮಾನರನ್ನೇ ಶಿಕ್ಷಿಸುವುದರಲ್ಲಿ ಬಹಳ ಪ್ರೀತಿ. ಅವರನ್ನು ನಂಬುತ್ತಲೇ ಇರಲಿಲ್ಲ." ಎಂದು ಹೊಟ್ಟೀಕಿಚ್ಚಿನ ಮಾತುಗಳನ್ನು ಹೇಳಿರುವನು.[22] ಇವನ ದರ್ಬಾರಿನಲ್ಲಿ ಹಿಂದುಗಳಿಗೆ ಶ್ರೇಷ್ಠವಾದ ಅಧಿಕಾರಗಳು ದೊರಿತವು. ಮೂರ್ತಿ ಭಂಜಕನೆಂದು ಹೆಸರುಪಡೆದಿರುವ ಸಿಕಂದರ್ ಲೂಡಿಯು ಕೂಡ ಹಿಂದುಗಳನ್ನು ಗೌರವಿಸಿ ಅವರ ಪ್ರೀತಿಯನ್ನು ಸಂಪಾದಿಸಿ, ತನ್ನ ರಾಜ್ಯವನ್ನು ದೃಢಪಡಿಸಲು ಪ್ರಯತ್ನಪಟ್ಟನು. ಹಿಂದು ಪ್ರಜೆಗಳಿಗೆ ರಾಜಭಾಷೆಯಾದ ಪಾರ್ಸೀಭಾಷೆಯನ್ನು ಕಲಿಯಲು ಅವಕಾಶವಿಲ್ಲದಿದ್ದುದನ್ನು ನೋಡಿ ಸುಲ್ತಾನನು ಅನೇಕ ಎಡೆಗಳಲ್ಲಿ ಪಾರ್ಸಿ ಪಂಡಿತರುಗಳನ್ನು ನೇಮಕಮಾಡಿ ಹಿಂದುಗಳೆಲ್ಲರೂ ಆ ಭಾಷೆಯನ್ನು ಕಲಿಯಲು ಅವಕಾಶವನ್ನು ಕೊಟ್ಟನು. ಈ ರಾಜಭಾಷೆಯಲ್ಲಿ ಪ್ರವೀಣರಾದ ಹಿಂದುಗಳಿಗೆ ಹೆಚ್ಚಿನ ಅಧಿಕಾರಗಳನ್ನು ಕೊಡುತ್ತಿದ್ದನು. ಹಿಂದುಗಳೆಲ್ಲರೂ ಉತ್ಸಾಹದಿಂದ ಈ ಹೊಸಭಾಷೆಯನ್ನು ಕಲಿತು ದೇಶದಲ್ಲೆಲ್ಲಿಯೂ ಪ್ರಾಮುಖ್ಯವನ್ನು ಪಡೆದರು. ರಾಜಕೀಯದಲ್ಲಿ ಇವನು ಮತಪಕ್ಷಪಾತಮಾಡುತ್ತಿರಲಿಲ್ಲ.

ಈ ವಿಚಾರದಲ್ಲಿ ಔರಂಗಜೇಬನು ಕೂಡ ಆದರ್ಶಪ್ರಾಯನಾಗಿ ವರ್ತಿಸಿರುತ್ತಾನೆ. ಅವನ ಕಾರ್ಯದರ್ಶಿಯಾದ "ವಾಲಿರಾಂ"ನ ವಿಚಾರವೇ ಇದಕ್ಕೆ ದೃಷ್ಟಾಂತ.[23] ಒಂದು ದಿನ ಕಾರ್ಯಮಗ್ನನಾಗಿದ್ದ ಔರಂಗಜೇಬನು ತನ್ನನ್ನು ಲಕ್ಷ್ಯಮಾಡಿ ಮಾತಾಡಲಿಲ್ಲವೆಂದು ತಪ್ಪುತಿಳಿವಳಿಕೆಯಿಂದ ರಾಜ್ಯಕಾರ್ಯದಲ್ಲಿ

---

[22] Proceedings of the Indian Historical Congress, p. 721.

[23] Muslim University Journal, Oct. 1940, p. 65-66

ವಿರಕ್ತನಾದ ವಾಲೀರಾಮನು ಆತುರಪಟ್ಟು ಸಂನ್ಯಾಸಿಯಾದನು. ಇದನ್ನು ಕೇಳಿ ಔರಂಗಜೇಬನು ಬಹಳವಾಗಿ ಪಶ್ಚಾತ್ತಾಪ ಗೊಂಡು ತನ್ನ ಪ್ರೀತಿಯ ಕಾರ್ಯದರ್ಶಿಯನ್ನು ಐಹಿಕವ್ಯಾಪಾರಕ್ಕೆ ಕರೆತರಲು ಪಾದಚಾರಿಯಾಗಿ ಹೋಗಿ ವಾಲೀರಾಮುನನ್ನು ಪ್ರೇಮಾದರದಿಂದ ಕೂಡಿದ ಮಾತುಗಳಿಂದ ಕರೆದನು. ಆದರೆ ಅವನ ಪ್ರಯತ್ನ ನಿಷ್ಫಲವಾಯಿತು. ವಾಲಿರಾಮನು ಬ್ರಹ್ಮಾಂಡ ದೊಡೆಯನನ್ನು ಮಾತ್ರವೇ ಸೇವಿಸಬೇಕೆಂಬ ಸಂಕಲ್ಪವನ್ನು ಮಾಡಿದ್ದನು.

ಮತ್ತೊಮ್ಮೆ ಔರಂಗಜೇಬನ ದುರ್ಬುದ್ಧಿಯಾದ ಸಖನೊಬ್ಬನು ಹಿಂದುಗಳನ್ನು ಕೆಲಸದಿಂದ ನಿವೃತ್ತಿಮಾಡಬೇಕೆಂದು ಒತ್ತಾಯಪಡಿಸಿದನು. ಇದಕ್ಕೆ ಔರಂಗಜೇಬನು ಈ ರೀತಿ ಉತ್ತರಕೊಟ್ಟನು. "ಧರ್ಮಕ್ಕೂ ರಾಜನೀತಿಗೂ ಸಂಬಂಧವೇ ಇಲ್ಲ. ರಾಜ್ಯಾಂಗದಲ್ಲಿ ಪರಮತಗಳ ಹಿಂಸೆಯು ತಪ್ಪು; ಅನರ್ಥದ ಮೂಲ. ಸರ್ಕಾರದ ಉದ್ಯೋಗವನ್ನು ಪ್ರತಿಯೊಬ್ಬ ವ್ಯಕ್ತಿಯ ಸಾಮರ್ಥ್ಯಕ್ಕೂ ಗುಣಕ್ಕೂ ಮೆಚ್ಚಿ ಕೊಡುವುದೇ ನ್ಯಾಯಸಮ್ಮತ.[24] ಅದು ಸ್ವಮತಸ್ಥರಿಗೆ ಕೊಡುವ ಲಂಚವಲ್ಲ."

ಇನ್ನೊಂದು ವೇಳೆ ಮೆಕ್ಕಾ ಪಟ್ಟಣದ ದೊರೆಯು ಔರಂಗಜೇಬನನ್ನು ಅಲ್ಲಿನ ಧರ್ಮಕಾರ್ಯಗಳಿಗೋಸ್ಕರ ಹಣವನ್ನು ಕಳುಹಿಸಬೇಕೆಂದು ಒತ್ತಾಯಪಡಿಸಿದನು. ಅದಕ್ಕೆ ಔರಂಗಜೇಬನು ಒಪ್ಪಲಿಲ್ಲ. "ಮೆಕ್ಕಾವಿನಲ್ಲಿರುವ ದೇವರು ಈ ಭಾರತಭೂಮಿಯಲ್ಲೂ ಇರುವನು; ಅರ್ಹರಾದ ಬಡವರು ಇಲ್ಲಿಯೂ ವಾಸ ಮಾಡುವರು. ದೇವರು ಎಲ್ಲೆಲ್ಲಿಯೂ ಇರುವನು. ಆದುದ

---

[24] Ibid p. 67.

ರಿಂದ ಇಲ್ಲಿಯೇ ಸತ್ಪಾತ್ರದಲ್ಲಿ ದಾನವನ್ನು ಏಕೆ ಮಾಡಬಾರದು" ಎಂದು ಪ್ರತ್ಯುತ್ತರವನ್ನು ಕೊಟ್ಟನು. ಈಗಿನ ನಿಜಾಂ ಸರಕಾರವು ಅನ್ಯದೇಶಗಳಿಗೆ ಹೋಗಿ ತನ್ನ ಸಂಪತ್ತನ್ನು ದುಂದುಗಾರಿಕೆಯಿಂದ ವ್ಯಯಮಾಡುವುದು ತಪ್ಪೆಂದು ತನ್ನ ಪ್ರಜೆಗಳಿಗೆ ಕಟ್ಟಾಜ್ಞೆ ಮಾಡಿರುವುದು ಎಲ್ಲರಿಗೂ ವೇದ್ಯವಾದ ವಿಷಯ. ಅಹಮದ್‌ನಗರ ಮತ್ತು ಬಿಜಾಪುರ್ ರಾಜರು ತಮ್ಮ ದೇಶದ ವಿಶೇಷ ಭಾಗವನ್ನು ಮಹಾರಾಷ್ಟ್ರದವರಿಗೆ ದಯಪಾಲಿಸಿದ್ದರು. ಮಹಾರಾಷ್ಟ್ರ ಭಾಷೆಯು ರಾಷ್ಟ್ರಭಾಷೆಯಾಗಿ ಗಣಿಸಲ್ಪಟ್ಟಿತು. ಮಹಾರಾಷ್ಟ್ರರೊಡನೆ ವಿವಾಹ ವ್ಯವಹಾರ ಸಂಬಂಧಗಳನ್ನು ಬೆಳಸಿ ಅವರ ಮುಖಂಡರಿಗೆ ಅಧಿಕಾರಗಳನ್ನು ಕೊಟ್ಟು ಅವರನ್ನು ರಾಜಕಾರ್ಯ ಪಟುಗಳನ್ನಾಗಿ ಮಾಡಿದರು. ಹಿಂದುಗಳಲ್ಲಿ ವಿಶೇಷ ಪ್ರೀತಿ ತೋರಿಸಿದುದಕ್ಕಾಗಿ ಇಬ್ರಾಹಿಂ ಆದಿಲ್‌ಷಹನಿಗೆ "ಜಗದ್ಗುರು" ಎಂಬ ಅಡ್ಡ ಹೆಸರು ಪ್ರಾಪ್ತವಾಯಿತು. ಗೋಲ್‌ಕೊಂಡ ಸುಲ್ತಾನನು ಇದೇ ರೀತಿಯಾಗಿ ತನ್ನ ಜನಗಳನ್ನು ಪಾಲನೆ ಮಾಡಿದನು. ತೆಲಗು ದೇಶೀಯರಿಗೆ ಮತ್ತು ಆ ಭಾಷೆಗೆ ಅಪೂರ್ವವಾದ ಉತ್ತೇಜನವು ದೊರಕಿತು. ಮುಸಲ್ಮಾನ್ ಗುರುಗಳು ಹಿಂದುಗಳ ಪ್ರೀತಿ ಗೌರವಗಳಿಗೆ ಪಾತ್ರರಾದರು. ಚಿರಕಾಲ ಪುತ್ರಸಂತಾನವಿಲ್ಲದ ರಾಜಾ ಮಾಲೋಜಿ ಭೌಂಸಲೆಯು ಷಹಾ ಷರೀಫಜಿ ಎಂಬ ಮುಸಲ್ಮಾನ್ ಗುರುವನ್ನು ಮೊರೆಹೊಕ್ಕು ಅವರ ಪ್ರಸಾದದಿಂದ ಎರಡು ಪುತ್ರರತ್ನಗಳನ್ನು ಪಡೆದನು. ಅವರುಗಳೇ ಆ ಗುರುವಿನ ನಾಮಾಂಕಿತರಾದ ಷಹಜೀ ಮತ್ತು ಷರೀಫಜಿ ಎಂಬ ಪ್ರಸಿದ್ಧ ಪುರುಷರು. ಈ ಷಹಜಿಯೇ ಶಿವಾಜಿ ಮಹಾರಾಜನ ತಂದೆ.

## ದಂಡನೀತಿ

ಮುಸಲ್ಮಾನ ರಾಜ್ಯದಲ್ಲಿ ದಂಡನೀತಿಯು ನಿಷ್ಪಕ್ಷಪಾತವಾಗಿ ಜರುಗುತ್ತಿತ್ತು. ಇದೇ ಅವರ ರಾಜ್ಯದ ಬುಡಕಟ್ಟು. ಈಗಿನ ಐರೋಪ್ಯರಂತೆ ಆಗಿನ ಹಿಂದುಗಳಾಗಲಿ ಮುಸಲ್ಮಾನರಾಗಲಿ ತಮಗಾಗಿಯೇ ಪ್ರತ್ಯೇಕ "ಜೂರಿಗಳ"ನ್ನೂ "ಜಡ್ಜು"ಗಳನ್ನು ಅಪೇಕ್ಷಿಸುತ್ತಿರಲಿಲ್ಲ. ಎರಡು ಪಂಗಡದವರಿಗೂ ಕ್ಲಿಪ್ತವಾದ ಒಂದೇ ನ್ಯಾಯಾಧಿಪತಿ; ದಂಡನೆಯಲ್ಲಿಯೂ ವ್ಯತ್ಯಾಸವಿರಲಿಲ್ಲ. ಹಿಂದೂ ಮುಸಲ್ಮಾನರಿಬ್ಬರಿಗೂ ಒಂದೇವಿಧವಾದ ಶಿಕ್ಷೆ ವಿಧಿಸುತ್ತಿದ್ದರು. ಪ್ರತಿಯೊಬ್ಬ ಕಾಜಿಯೂ (ಮುಸಲ್ಮಾನ್ ನ್ಯಾಯಾಧಿಪತಿ) ಕೆಲವು ಬ್ರಾಹ್ಮಣ ನೀತಿಶಾಸ್ತ್ರಜ್ಞರ ಸಹಾಯವನ್ನು ಪಡೆದೇ ವಿವಾದಗಳಲ್ಲಿ ತನ್ನ ತೀರ್ಮಾನವನ್ನು ಕೊಡುತ್ತಿದ್ದನು.

ರಾಜರು ಸಹ ಧರ್ಮಭೀರುಗಳಾಗಿ ಇವನು ಅಮೀರ, ಇವನು ಫಕೀರ ಎಂದು ಗಣಿಸದೆ ಒಂದೇಸಮನಾದ ಶಿಕ್ಷೆಯನ್ನೂ ಮರ್ಯಾದೆಯನ್ನೂ ಮಾಡುತ್ತಿದ್ದರು. ಇವರ ನಿಷ್ಪಕ್ಷಪಾತವಾದ ರಾಜನೀತಿಯೂ ಬಿಕ್ಕಟ್ಟಾದ ರಾಜ್ಯದ ಆಡಳಿತವೂ ಹಿಂದುಗಳ ಮನಸ್ಸನ್ನು ಒಲಿಸಿಕೊಂಡಿದ್ದುವು. ಇದನ್ನು ನೋಡಿದ ಐರೋಪ್ಯಯಾತ್ರಿಕರು ಬೆರಗಾದರು. ಜಹಾಂಗೀರನು ನೀತಿಯಿಂದ ರಾಜ್ಯವನ್ನಾಳಿ "ಧರ್ಮಸಿಂಹ" (The Lion of Justice)ನೆಂದು ಕೀರ್ತಿಯನ್ನು ಪಡೆದನು. ಷಹಜಹಾನನಂತೂ ತನ್ನ ಪ್ರಜೆಗಳನ್ನು ನಿಸ್ಸೀಮವಾದ ಪ್ರೇಮದಿಂದಲೂ ಅನ್ಯಾದೃಶವಾದ ನ್ಯಾಯದಿಂದಲೂ ಪಾಲನೆ ಮಾಡಿ "ಪ್ರಜೆಗಳ ಪಿತಾಮಹನೆಂದು" ಶಾಶ್ವತವಾದ ಕೀರ್ತಿಯನ್ನು ಪಡೆದನು. "ಟೇವರ್ ನೀಯರ್" ಎಂಬ ಫ್ರೆಂಚ್

ವ್ಯಾಪಾರಿಯು ಷಹಜಹಾನನ ದಂಡನೀತಿಯನ್ನು ಕುರಿತು ವಿಶೇಷ ಪ್ರಶಂಸೆಯನ್ನು ಮಾಡಿರುವನು. "ಈ ಚಕ್ರವರ್ತಿಯ ಕಾಲದಲ್ಲಿ ರಾಜ್ಯವು ಸುಭಿಕ್ಷವಾಗಿಯೂ ಸುಸಂಘಟಿತವಾಗಿಯೂ ಇದ್ದು ಜನರು ನಿರ್ಭೀತರಾಗಿ ವಾಸಮಾಡುವರು. ವಿಶ್ರಾಂತಿ ಇಲ್ಲದೆ ಈ ರಾಜನು ಜನರಿಗಾಗಿ ದುಡಿಯುವುದರಿಂದ ರಾಜ್ಯದಲ್ಲಿ ಕಳ್ಳಕಾಕರರೇ ಇಲ್ಲದಂತಾಗಿ ದಂಡನೆ ವಿಧಿಸುವ ಸಂಭವವೇ ಇದ್ದಿಲ್ಲ." ಇವನ ಧರ್ಮನಿಷ್ಠತೆಯನ್ನು ಹಿಂದೂ ಚರಿತ್ರಕಾರನಾದ "ರಾಯ್‌ಭಡಾಮಲ್ಲ"ನು ಅತಿ ವಿಶದವಾಗಿ ತನ್ನ ಚರಿತ್ರೆಯಲ್ಲಿ ವಿವರಿಸಿರುವನು.

ಓವಿಂಗ್‌ಟನ್ (Ovington)[28] ಎಂಬ ಮತ್ತೊಬ್ಬನು ಹೀಗೆ ಹೇಳಿರುವನು. "ಮೊಗಲ್ ಚಕ್ರವರ್ತಿಯು ನ್ಯಾಯವಾರಿಧಿ ಎಂದು ಪ್ರಸಿದ್ಧನು. ಅವನ ನೀತಿಯೂ ದೃಢತೆಯೂ ಸರ್ವ ಸಮಾನವಾಗಿರುವುದು. ಇವನು ಅಮೀರನು ಇವನು ಫಕೀರನು ಎಂದು ತಿಳಿದು ಶಿಕ್ಷೆಯನ್ನು ವಿಧಿಸುತ್ತಿರಲಿಲ್ಲ." ಇವನಂತೆ ಇನ್ನೂ ಅನೇಕ ಯಾತ್ರಿಕರಾದ ಟೆರಿ, ವ್ಯಾನ್ಸ್ಯಕ್ಕಿ ಮತ್ತು ಬರ್ನಿಯರ್ ಮುಂತಾದವರು ಒಂದೇ ಬಗೆಯಾಗಿ ಅವನನ್ನು ಕೊಂಡಾಡಿರುವರು.

ಈ ಪ್ರಕಾರವಾಗಿ ಸರ್ವಜನಾಂಗಗಳನ್ನು ಏಕಧರ್ಮ ಏಕನೀತಿ ಏಕರೀತಿಯಾಗಿ ಪಾಲನೆಮಾಡಿದುದರಿಂದ ಹಿಂದು ಮುಸಲ್ಮಾನರು ಒಂದೇ ಜನಾಂಗದವರೆಂದು ಭಾವಿಸಲು ಅವಕಾಶ ದೊರೆಯಿತು. ಮೊಗಲ್ ಸಮ್ರಾಟರು ಇಡೀ ಭರತ ಖಂಡಕ್ಕೆ ಒಡೆಯರೆಂಬ ಭಾವನೆ ಎಲ್ಲರಲ್ಲೂ ಹುಟ್ಟಿತು. "ಇಡೀ ಭರತ ಖಂಡದಲ್ಲಿ ಏಕಚಕ್ರಾಧಿಪತ್ಯವನ್ನು ಸ್ಥಾಪನೆಮಾಡಿ, ಸರ್ವ ಸಮ್ಮತವಾದ ಒಂದೇ ರಾಜನೀತಿಯನ್ನೂ ದಂಡನೀತಿಯನ್ನೂ

ಈ ಜನಾಂಗಗಳಲ್ಲಿ ಆಚರಣೆಗೆ ತಂದು, ಈ ದೇಶದಲ್ಲಿ ನೆಲಸಿರುವ ಜಾತಿಭೇದಗಳನ್ನೆಲ್ಲಾ ತಗ್ಗಿಸಿ, ಇಲ್ಲಿ ನೆಲಸಿದ್ದ ಅನೇಕ ಮತ ಧರ್ಮಗಳಿಗೂ ಸಮವಾದ ಗೌರವ ಮತ್ತು ಪೋಷಣೆಗಳನ್ನು ಕೊಟ್ಟು ಜನಗಳಲ್ಲಿ ಐಕಮತ್ಯವನ್ನು ಬಿತ್ತಿ ಏಕೀಭಾವವನ್ನು ಉಂಟುಮಾಡಿರುವರು ಎಂದು ಡಾ|| ಸೈಯದ್ ಮಹಮುದ್ ಎಂಬ ಮಂತ್ರಿವರ್ಯರು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿರುವರು. ಹಿಂದುಗಳು ಮೊಗಲ್‌ರಾಜ್ಯದಲ್ಲಿ ತಮಗೆ ಸಮಭಾಗ ವಿತ್ತೆಂದು ಹೆಮ್ಮೆಪಡುತ್ತಿದ್ದರು. ಆದುದರಿಂದಲೇ 'ಜೆಸಿಯಾ' ಕಂದಾಯವನ್ನು ಔರಂಗಜೇಬನು ಹಾಕಿದಾಗ ಜನರು ಕ್ರೋಧ ಪರವಶರಾದರು. ಕಂದಾಯವೇನೂ ಭಾರವಲ್ಲ. ಆದರೆ ಅದು ಅವರಿಗೆ ಅವಮಾನಕರ. ಒಟ್ಟಿನಲ್ಲಿ ಮೊಗಲರ ಕಾಲದಲ್ಲಿ ಜನ ಸಾಮಾನ್ಯರು ತಮ್ಮ ಜೀವನವನ್ನು ಸಮೃದ್ಧಿ ಸಂತೋಷಗಳಿಂದ ಕಳೆದರು. ಇದನ್ನು ನೋಡಿಯೇ ಹೆನ್ರಿಲಾರೆನ್ಸ್ "ಭಾರತೀಯರು ತಮ್ಮ ದೊರೆಯು ಎಷ್ಟೇ ಹುಚ್ಚನಾದರೂ ಅವನ ಆಳ್ವಿಕೆಯಲ್ಲಿ ಅನುಭವಿಸುವ ಸಂತೋಷವನ್ನು ಫರಂಗಿಯವರ ರಾಜ್ಯಪರಿಪಾಲನೆಯಲ್ಲಿ ತೋರಿಸಲಿಲ್ಲ. ನಮ್ಮ ಶ್ರಮಗಳೆಲ್ಲವೂ ವ್ಯರ್ಥ." ಎಂದು ಉದ್ಗಾರಮಾಡಿರುವನು.

## ಮತಧರ್ಮ

ವಾಸ್ತವವಾಗಿ ವಿಮರ್ಶೆಮಾಡಿ ನೋಡಿದಲ್ಲಿ ಧರ್ಮಿಷ್ಠರಾದ ಮುಸಲ್ಮಾನ ರಾಜರುಗಳೂ, ಅವರ ಸರ್ಕಾರವೂ ಅನ್ಯ ಮತಗಳಿಗೂ ಅನ್ಯಧರ್ಮಗಳಿಗೂ ಅವಕಾಶವನ್ನು ಕೊಟ್ಟಿರುವುದು ಗಮನಾರ್ಹವಾದ ಒಂದು ವಿಷಯ. ಹದಿನಾರು ಹದಿನೇಳನೆಯ ಶತಮಾನಗಳಲ್ಲಿ ಯೂರೋಪುಖಂಡದಲ್ಲಿ ಈಸಾಯಿ

ಗಳೇ ಒಬ್ಬರನ್ನೊಬ್ಬರು ಅಗ್ನಿಗೆ ಆಹುತಿಯಾಗಿ ಕೊಡುತ್ತಿದ್ದರು. ಆದೇಕಾಲದಲ್ಲಿ ಭಾರತೀಯ ಮುಸಲ್ಮಾನರಾಜರು ಅನ್ಯಮತಗಳಿಗೆ ಅನನ್ಯಸಹಾನುಭೂತಿ ತೋರಿಸಿದ ವಿಷಯವು ಅತಿ ಪ್ರಶಂಸನೀಯವಾದ ಘಟನೆ. ಫಿನ್‌ಲೆ ಎಂಬ ಚರಿತ್ರಕಾರನು "ಪರಮತ ಸಹಿಷ್ಣುತೆ ಇಸ್ಲಾಮಿಯರಲ್ಲಲ್ಲದೆ ಮತ್ತೆಲ್ಲಿಯೂ ಕಾಣುವುದಿಲ್ಲ" ಎಂದು ಬರೆದಿರುವನು. ವಿಜಯಶಾಲಿಯಾದ ಮಹಮದ್ ಬಿನ್ ಖಾಸೀಮನು, ಸಿಂಧೂದೇಶ ನಿವಾಸಿಗಳಾದ ಬ್ರಾಹ್ಮಣರಿಗೆ ಕೊಟ್ಟ ಅಭಯಪತ್ರವನ್ನು ನೆನಪಿನಲ್ಲಿಡುವುದು ಅವಶ್ಯಕ. "ಮುಸಲ್ಮಾನರ ಮಸೀದಿಯಂತೆಯೂ ಯೇಹೂದ್ಯರ ಪುಣ್ಯಸ್ಥಳಗಳಂತೆಯೂ, ಹಿಂದುಗಳ ದೇವಾಲಯಗಳೂ ರಕ್ಷಿಸಲ್ಪಡತಕ್ಕವು" ಎಂದು ಖಾಸೀಮನು ಒಂದು ಕಾನೂನನ್ನು ಹೊರಡಿಸಿದನು.[30] ಸುಲ್ತಾನ್ ಸಿಕಂದರ್ ಲೂಡಿಯು ಒಂದು ದಿವಸ ಹಬ್ಬದ ನಿಮಿತ್ತವಾಗಿ ಗಲಭೆಯು ಏಳದಂತೆ ಮುಸಲ್ಮಾನ್ ಮತ್ತು ಹಿಂದುಗಳು ಇಬ್ಬರನ್ನೂ ಕುರುಕ್ಷೇತ್ರದಲ್ಲಿ ಬಾರದಂತೆ ಆಜ್ಞೆಯನ್ನು ಮಾಡಿದನು. ಆದರೆ ಅವನ ಮುಖ್ಯ ಧರ್ಮಾಧಿಕಾರಿಯಾದ ಮಿಯಾನ್ ಅಬ್ದುಲ್ಲಾ ಎಂಬವನಿಗೆ ಇದು ಅನ್ಯಾಯವೆಂದು ತೋರಿತು. ಅವನು ರಾಜನ ಬಳಿ ಹೋಗಿ ಒತ್ತಾಯಮಾಡಿ ಹಿಂದುಗಳ ಮೇಲೆ ಅವನು ಹಾಕಿದ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಮಾಡಿದನು. ಅನಂತರ ಹಿಂದುಗಳು ತಮ್ಮ ಸ್ನಾನ ಆಹ್ನಿಕಗಳನ್ನು ನಿರಾಯಾಸವಾಗಿ ಕುರುಕ್ಷೇತ್ರದಲ್ಲಿ ನಡೆಸಿದರು.[25] ಅಲ್ಲಾವುದ್ದೀನ್ ಖಿಲ್ಜಿಯ ಚಿಕ್ಕಪ್ಪನಾದ ಜಲಾಲ್ ಉದ್ದಿನ್ ಖಿಲ್ಜಿಯು ಹಿಂದುಗಳಲ್ಲಿ ವಿಶೇಷ ಸಹಾನು

[25] Muslim University Journal Oct. 1940, p. 60.

ಭೂತಿಯಿಂದ ವರ್ತಿಸುತ್ತಿದ್ದನು. ಸಂಕುಚಿತ ಬುದ್ಧಿಯುಳ್ಳ ಕೆಲವು ಮುಸಲ್ಮಾನರಿಗೆ ಇದು ಸರಿಹೋಗಲಿಲ್ಲ, ಅವರಲ್ಲೊಬ್ಬನು ರಾಜನಲ್ಲಿಗೆ ಹೋಗಿ ಹಿಂದುಗಳು ಹೆಮ್ಮೆಯಿಂದ ಮೆರೆಯುತ್ತಿರುವುದನ್ನು ತಗ್ಗಿಸಬೇಕೆಂದು ಪ್ರಾರ್ಥಿಸಿದನು. ಆದರೆ ಉದಾರಚರಿತನಾದ ಸುಲ್ತಾನನು ಇಂತೆಂದು ಉತ್ತರ ಕೊಟ್ಟನು.[26] "ದಿನವಹಿ ನನ್ನ ಅರಮನೆಯ ಮುಂದುಗಡೆಯೇ ಹಿಂದುಗಳು ಶಂಖ. ಭೇರಿಗಳೊಡನೆ ತಮ್ಮ ವಿಗ್ರಹಗಳನ್ನೆತ್ತಿಕೊಂಡು ವಿಜೃಂಭಣೆಯಿಂದ ಮೆರವಣಿಗೆ ಹೋಗುವರು. ಅವರನ್ನು ಬೇಡವೆಂದು ತಡೆಯಲು ನಾನು ಅಶಕ್ತನು. ನನ್ನ ಅಧಿಕಾರವನ್ನು ಅವರು ತಿರಸ್ಕಾರಮಾಡಿರುವರು. ಧನದಿಂದಲೂ, ದರ್ಪದಿಂದಲೂ ಮೆರೆಯುತ್ತಿರುವರು. ನನಗೆ ಅವರು ಕೊಡುವುದೆಲ್ಲಾ ಕಂದಾಯವಾಗಿ ಒಂದೆರಡು ರೂಪಾಯಿ ಮಾತ್ರ." ಈ ಉದಾಹರಣೆಯಿಂದ ಮುಸಲ್ಮಾನರ ಆಡಳಿತದಲ್ಲಿ ಹಿಂದುಗಳ ಧರ್ಮದ ಆಚರಣೆಗೆ ಯಾವ ಅಡಚಣೆಯೂ ಮುಸಲ್ಮಾನರಿಂದ ಉಂಟಾಗಲಿಲ್ಲವೆಂದು ಕಂಡು ಬರುವುದು. ಅಲ್ಲಾವುದ್ದೀನ್ ಖಿಲ್ಜಿಯು ಐಶ್ವರ್ಯಮತ್ತರಾಗಿ, ದಂಗೆಕೋರರಾದ ಹಿಂದುಗಳನ್ನು ಮಾತ್ರ ಸೊಕ್ಕುಮುರಿದನು. ಇದೇ ನೀತಿಯು ಮುಸಲ್ಮಾನ ಸರದಾರರಿಗೂ ಅನ್ವಯಿಸುತ್ತಿತ್ತು. ಮಹಮದ್ ಬಿನ್ ತೊಗಲಕನ ರಾಜ್ಯದಲ್ಲಿ ರಾಜನ ಆಶ್ರಯದಲ್ಲಿ ಹಿಂದುಗಳು ಐಶ್ವರ್ಯವಂತರಾಗಿ ಮೆರೆಯುತ್ತಿದ್ದುದರಿಂದ ಅಸೂಯೆಯಿಂದ ಅಂಧನಾದ ಬರಾನಿಯು ಅತಿಶಯೋಕ್ತಿದೋಷದಿಂದ ತುಂಬಿರುವ ಚರಿತ್ರೆಯನ್ನು ಬರೆದು ಸುಲ್ತಾನನಿಗೆ ಐಲುದೊರೆಯೆಂಬ ಹೆಸರು ಬರುವಂತೆ ಮಾಡಿದನು.

---

[26] Bibliothica Indica, p. 216-17.

ಬಾಬರ್ ಮೊದಲಾಗಿ ಒಬ್ಬೊಬ್ಬ ಮೊಗಲ್ ಚಕ್ರವರ್ತಿಯೂ ಹಿಂದು ಧರ್ಮಗಳಿಗೆ ವಿಶೇಷ ಗೌರವವನ್ನು ತೋರಿಸುತಿದ್ದನು. ಇಡೀ ಸಾಮ್ರಾಜ್ಯದಲ್ಲಿ ಗೋಹತ್ಯವು ನಿರಾಕರಿಸಲ್ಪಟ್ಟಿತು. ಹಿಂದು ' ಸಂತರು ' ಗಳಿಗೂ ದೇವಾಲಯಗಳಿಗೂ ರಕ್ಷಣೆ ದೊರೆಯಿತು. ಬಲಾತ್ಕಾರದಿಂದ ಹಿಂದುವನ್ನು ಮುಸಲ್ಮಾನನನ್ನಾಗಿ ಮಾಡುವುದು ತಪ್ಪೆಂದು ಮುಸಲ್ಮಾನ್ ಧರ್ಮಜ್ಞರೇ ಹೇಳಿರುವರು. ಔರಂಗಜೇಬನ ರಾಜ್ಯದಲ್ಲಿಯೂ ಹಿಂದುಗಳು ತಮ್ಮ ಧರ್ಮಕ್ಕೆ ಲೋಪವಿಲ್ಲದಂತೆ ಆಚರಿಸುತ್ತಿದ್ದರು. ಪರಧರ್ಮಗಳಿಗೆ ಮುಸಲ್ಮಾನರಿಂದ ಹಿಂಸೆಯು ಆಗುತ್ತಿರಲಿಲ್ಲವೆಂದು 1680 ನೆಯ ಇಸವಿಯಲ್ಲಿ ಅಲೆಗ್ಝಾಂಡರ್ ಹ್ಯಾಮಿಲ್‌ಟನ್, ಎಂಬವನು ಸಾಧಿಸಿರುವನು.[27] ದಿಲ್ಲೀ ಪ್ರದೇಶದ ಸುತ್ತಮುತ್ತಿನ ಜನಾಂಗದಲ್ಲಿ ಶೇಕಡ 70 ಮಂದಿ ಹಿಂದುಗಳಾಗಿರುವುದೇ ಮುಸಲ್ಮಾನರ ಪರಮತ ಸಹಾನುಭೂತಿಗೆ ಹೆಗ್ಗುರುತು.

ನಮ್ಮ ಮೈಸೂರು ದೇಶದಲ್ಲಿಯೂ ಹಾಗೆಯೇ ಸುಲ್ತಾನರ ಅರಮನೆಯ ಎದುರುಗಡೆಯಲ್ಲಿಯೇ ಶ್ರೀರಂಗನಾಥನ ದೇವಾಲಯದಲ್ಲಿ ಪ್ರತಿದಿನವಲ್ಲಿಯೂ ಪೂಜಾ, ನವಬತ್ತು, ನಗಾರಿಗಳು ಜರುಗುತ್ತಿದ್ದವು. ಇಬ್ಬರು ನವಾಬರೂ ಶ್ರೀರಂಗನಾಥನ ಗೊಡವೆಗೆ ಹೋಗಲಿಲ್ಲ; ಅವನಲ್ಲಿ ವಿಶೇಷ ಭಕ್ತಿ ಭಾವನೆಯನ್ನು ತೋರಿಸಿದರು. ಒಂದು ದಿನ ಶ್ರೀರಂಗನಾಥನ ಗೋಪುರವು ಮದ್ದಿನ ಆಸ್ಫೋಟನದಿಂದ ಮುರಿದುಬಿತ್ತು. ತಕ್ಷಣವೇ ಹೈದರನು ಭೀತಿಗೊಂಡು ಆ ಗೋಪುರವನ್ನು

[27] A New Account of East Indies by Alexander Hamilton, Vol II. p. 14.

ಸಿಪಾಯಿಗಳ ಕೈಯಿಂದಲೇ ಕಟ್ಟಿಸಿದನು. ನಂಜನಗೂಡು ದೇವಾಲಯದಲ್ಲಿ ಸ್ಥಾಪಿತವಾದ ಒಂದು ಪಚ್ಚೆಲಿಂಗವು ಈಗಲೂ ಹೈದರ್‌ಲಿಂಗವೆಂದು ಕರೆಯಲ್ಪಟ್ಟು ಭಾರತೀಯರಲ್ಲಿ ಆಶ್ಚರ್ಯವನ್ನುಂಟುಮಾಡಿರುವುದು. ಈ ದೇವರ ಪೂಜೆಗೋಸ್ಕರ ಹೈದರನು ಅನೇಕ ಜಮೀನುಗಳನ್ನೂ ಚಿನ್ನ ಬೆಳ್ಳಿ ಸಾಮಾನುಗಳನ್ನೂ ದಾನಮಾಡಿರುವನು. ಮಹಾರಾಷ್ಟ್ರ ವೀರನಾದ ಪರಶುರಾಂ ಭಾವುವಿನ ಪಿಂಡಾರಿಸೇನೆಗಳು ಶೃಂಗೇರಿಯನ್ನು ಲೂಟಿಮಾಡಿ ಹೋದಾಗ ಟೀಪೂಸುಲ್ತಾನನು ತನ್ನ ಪಶ್ಚಾತ್ತಾಪ ಸೂಚಕವಾದ ಒಂದು ಪತ್ರವನ್ನು ಶೃಂಗೇರಿ ಸ್ವಾಮಿಗಳವರಿಗೆ ಬರೆದು ಶ್ರೀಸ್ವಾಮಿಗಳವರಿಗೆ ಅವಶ್ಯಕವಾದ ದ್ರವ್ಯ ಸಹಾಯವನ್ನೂ ಉಡಿಗೆಗಳನ್ನೂ ಅವರ ರಕ್ಷಣೆಗೋಸ್ಕರ ಒಂದು ತುಕಡಿ ಸೈನ್ಯವನ್ನೂ ಕಳುಹಿಸಿದನು.[28]

ಮತ್ತೊಂದು ಆಶ್ಚರ್ಯವೇನೆಂದರೆ ಮೇಲುಕೋಟೆಯ ಶ್ರೀ ಚೆಲುವರಾಯ ಸ್ವಾಮಿಯು ಒಬ್ಬಳು ಮುಸಲ್ಮಾನ್ ರಾಜಕುಮಾರಿಯನ್ನು ಮದುವೆಯಾಗಿರುವನು. ಇಂದಿಗೂ ಆ ರಾಜನಂದಿನಿಗೆ ಅಲ್ಲಿ ಪೂಜಾ ನೈವೇದ್ಯಗಳು ಸಲ್ಲುವುವು.* ದೈವಭಕ್ತರು ಇವಳನ್ನು ದೇವಾಂಶ ಸಂಭೂತಳೆಂದು ಎಣಿಸುವರು. ಇದರ ಐತಿಹ್ಯವೇನೆಂದರೆ: ಮಲ್ಲಿಕಾಫರನು ದಕ್ಷಿಣ ದಿಗ್ವಿಜಯದ ಕಾಲದಲ್ಲಿ ಯದುಗಿರಿಯ ಚೆಲುವರಾಯ ಸ್ವಾಮಿಯನ್ನು ಯದುಗಿರಿಯಿಂದ ಸಾಗಿಸಿ ದಿಲ್ಲೀಶ್ವರನ ಬೊಕ್ಕಸದಲ್ಲಿ ಸೇರಿಸಿಟ್ಟಿದ್ದನು. ಚಕ್ರವರ್ತಿಯ ಮಹಾತ್ಮಳಾದ ಮಗಳು ಇದನ್ನರಿತು ಆ ಸ್ವಾಮಿ

[28] Mysore Archaeological Report for 1916.

*ಇಲ್ಲಿರುವಂತೆಯೇ ಶ್ರೀರಂಗ ಮುಂತಾದ ಸ್ಥಳಗಳಲ್ಲೂ ಇಂಥ ವಿಗ್ರಹಗಳಿವೆ

ಯನ್ನು ತಂದು ತನ್ನನ್ನೇ ಅವನಿಗೆ ಅರ್ಪಣಮಾಡಿದಳು. ಕೆಲವು ಕಾಲದ ಅನಂತರ ಒಬ್ಬ ಭಕ್ತಶಿರೋಮಣಿಯು ದಿಲ್ಲೀಶ್ವರನನ್ನು ಕಂಡು ಅವನನ್ನು ಒಲಿಸಿ ಚೆಲುವರಾಯ ಸ್ವಾಮಿಯನ್ನು ಪಡೆದು ಮೇಲುಕೋಟೆಗೆ ತಿರುಗಿ ಬಂದು ಆ ಸ್ವಾಮಿಯನ್ನು ಪುನಃ ಅಲ್ಲಿ ಸ್ಥಾಪನೆ ಮಾಡಿದನು. ತನ್ನ ಪ್ರಿಯ ಸ್ವಾಮಿಯ ವಿಯೋಗವನ್ನು ಸಹಿಸಲಾರದೆ ಆ ವರನಂದಿನಿಯು ಪಾದಚಾರಿಯಾಗಿ ಯದುಗಿರಿಗೆ ಬಂದು ಮನಃಶಾಂತಿಯನ್ನು ಪಡೆದು ಸ್ವಾಮಿಯಲ್ಲಿ ಐಕ್ಯವನ್ನು ಹೊಂದಿದಳು.

ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಬಾಬಾಬುಡನ್‌ಗಿರಿಯೆಂಬ ಹೆಸರು ಪಡೆದಿರುವ ದತ್ತಾತ್ರೇಯ ಪೀಠವು ಹಿಂದೂ ಮುಸಲ್ಮಾನರ ಸೌಹಾರ್ದದ ಮತ್ತೊಂದು ಹೆಗ್ಗುರುತು.

ಮದರಾಸ್ ಅಧಿಪತ್ಯದ ನಾಗೂರ್ ಪಟ್ಟಣದಲ್ಲಿರುವ ಮಹಾತ್ಮ ಮೀರಾನ್ ಸಾಹೇಬ್‌ನ ದರ್ಗದಲ್ಲಿ ಸಾವಿರಾರು ಹಿಂದೂ ಮುಸಲ್ಮಾನರು ಬಂದು ಪೂಜೆಮಾಡುವರು. ಸೌಹಾರ್ದದಿಂದ ಎಲ್ಲಾ ಜಾತಿಯವರೂ ಒಂದೇ ಕೊಳದಲ್ಲಿ ಸ್ನಾನ ಮಾಡಿ, ಒಂದೇ ಸಮಾಧಿಯ ಮುಂದೆ ಪ್ರಾರ್ಥನೆ ಮಾಡುವರು. ದಕ್ಷಿಣ ಮಧುರೆಯ ಹತ್ತಿರ ಇರುವ ಸಿಕಂದರ್ ಷಹನ ಆಲಯಕ್ಕೆ ಪ್ರತಿಯೊಬ್ಬ ಹಿಂದುವೂ ಹೋಗುವುದು ರೂಢಿಯಲ್ಲಿದೆ. ಸಿಕಂದರ್ ಷಹನ ದರ್ಶನಕ್ಕಾಗಿ ಬಂದ ಪ್ರತಿಯೊಬ್ಬ ಮುಸಲ್ಮಾನನೂ ಸಮೀಪದ ಸುಬ್ರಹ್ಮಣ್ಯಸ್ವಾಮಿಯ ದೇವಸ್ಥಾನವನ್ನು ಹೊಕ್ಕು ದರ್ಶನ ಮಾಡಿ ಬರುವುದು ಈಗಲೂ ಆಚರಣೆಯಲ್ಲಿದೆ.

ಕೆಲವು ಮುಸಲ್ಮಾನ ಅರಸುಗಳು ಹಿಂದುಗಳ ಗೌರವಕ್ಕೆ ಪಾತ್ರವಾದ ಅವರ ಚಿಹ್ನೆ ಅಥವಾ ಲಾಂಛನಗಳನ್ನು ಸ್ವೀಕರಿಸಿ

ದರು.[29] ಸುಲ್ತಾನ್ ಮಹಮುದ್ ಘಜ್ನಿ, ಮಹಮುದ್ ಘೋರಿ ಮುಂತಾದವರು ಅವರ ನಾಣ್ಯಗಳ ಮೇಲೆ ಹಿಂದುಗಳ ಲಾಂಛನವಾದ ಪದ್ಮ, ತ್ರಿಶೂಲ, ಸ್ವಸ್ತಿಕ ಮತ್ತು ಶ್ರೀ ಎಂಬ ಅಕ್ಷರವನ್ನು ಸಂಕೋಚವಿಲ್ಲದೆ ಮುದ್ರಿಸಿದರು. ಇವರು ಸಂಸ್ಕೃತಭಾಷೆಯನ್ನೂ ಅಕ್ಷರವನ್ನೂ ಸಹ ಉಪಯೋಗಿಸುತ್ತಿದ್ದರು. ಘಜ್ನಿ ಮಹಮೂದನ ನಾಣ್ಯದ ಮೇಲೆ ಸಂಸ್ಕೃತ ಭಾಷೆಯು ಕಂಡುಬರುವುದು. ಅದರಲ್ಲಿ ದೇವನಿಗೆ "ಅವ್ಯಕ್ತ", ಪೈಗಂಬರರಿಗೆ "ಅವತಾರ" ಎಂಬ ಶಬ್ದ ಪ್ರಯೋಗ ಮಾಡಿರುವರು. ಮಹಮುದ್ ಘೋರಿಯ ನಾಣ್ಯದ ಮೇಲೆ ಶ್ರೀ ಎಂಬ ಅಕ್ಷರವೂ ಲಕ್ಷ್ಮೀದೇವಿಯ ರೂಪವೂ ಮುದ್ರಿತವಾಗಿರುವುವು. ಷೇರ್‌ಷಹನು ಇದೇ ಪದ್ಧತಿಯನ್ನು ಪುನರುದ್ಧರಿಸಿದನು. ಅವನ ಕಾನೂನುಗಳಲ್ಲಿ ಸಂಸ್ಕೃತ, ಹಿಂದಿ, ಪರ್ಶಿಯನ್ ಭಾಷೆಗಳು ಉಪಯೋಗವಾಗಿವೆ. ಅವನು ಧರ್ಮಶಾಲೆಗಳನ್ನು ಕಟ್ಟಿದಾಗ ಹಿಂದುಗಳಿಗೆ ಪ್ರತ್ಯೇಕವಾಗಿ ಏರ್ಪಾಟು ಮಾಡಿ ಅವರುಗಳ ಸಹಾಯಕ್ಕೋಸ್ಕರ ಬ್ರಾಹ್ಮಣ ಪರಿಚಾರಕರನ್ನು ನೇಮಿಸಿದನು. ಇದರ ವಿಷಯವಾಗಿ ಸರ್ ವಿಲಿಯಂ ಕ್ರೂಕ್ಸ್ ಎಂಬ ಮಹಾಶಯನು[30] "ಫರಂಗಿಯವರಿಗಿಂತ ಈ ಪಠಾಣನೇ ಅಧಿಕವಾದ ಜಾಣತನವನ್ನು ವ್ಯಕ್ತಪಡಿಸಿರುವನು." ಎಂದು ಬರೆದಿರುವನು. ಬುರ್ಹಾನ್ ಪುರದಲ್ಲಿ ಒಂದು ಮಸೀದಿಯು ಸ್ಥಾಪನೆಯಾದಾಗ ಅದರ ವಿಚಾರವಾಗಿ ಒಂದು ರಾಜ

---

[29] Proceedings, The Indian Historical Congress, 1939 pp. 673-75.

[30] Gazetteer of The North Western Provinces, p 249.

ಶಾಸನವು ಸಂಸ್ಕೃತ ಭಾಷೆಯಲ್ಲಿ ಬರೆಯಲ್ಪಟ್ಟಿರುವುದು.[31] ಸಂಸ್ಕೃತ ಸಮಾಗಮದಿಂದ ಇಸ್ಲಾಂಮತಕ್ಕೆ ಯಾವ ವಿಧವಾದ ಕೊರತೆಯೂ ಉಂಟಾಗಲಿಲ್ಲವೆಂದು ಸ್ಪಷ್ಟವಾಗಿರುವುದು.

## ಸಾಹಿತ್ಯ

ಜ್ಞಾನಾರ್ಜನೆಯಲ್ಲಿ ಮುಸಲ್ಮಾನ ವಿದ್ವಾಂಸರು ನಿಸ್ಸೀಮ ಸಾಹಸಿಗಳು. ದೇಶದೇಶಾಂತರಗಳಿಂದ ತತ್ವಶಾಸ್ತ್ರವನ್ನೂ ಭೌತಶಾಸ್ತ್ರವನ್ನೂ ಕಲಿತ ಪಂಡಿತರುಗಳಿಗೆ ಆಹ್ವಾನವನ್ನು ಕೊಟ್ಟರು. ಗ್ರೀಕ್ ಭಾಷೆಯಿಂದಲೂ ಸಂಸ್ಕೃತ ಭಂಡಾರದಿಂದಲೂ ವಿಶೇಷ ಆತುರದಿಂದ ಹೊಸ ಹೊಸದಾದ ವಿಷಯಗಳನ್ನು ಕಲಿತು ತಮ್ಮ ಸ್ವಾಧೀನಪಡಿಸಿಕೊಂಡರು. ಅಲ್ಬೆರೂನಿಯು ಸಂಸ್ಕೃತ ಮತ್ತು ಪರ್ಶಿಯನ್ ಭಾಷೆಗಳಲ್ಲಿ ಅದ್ವಿತೀಯ ಪಂಡಿತನು. ಫಿರೋಜ್-ಷಾ-ತೊಗಲಕನು ನಾಗರ್ ಕೋಟೆಯಲ್ಲಿ ದೊರೆತ ಸಾವಿರಾರು ಸಂಸ್ಕೃತ ಪುಸ್ತಕಗಳನ್ನು ಪಾರ್ಸಿಭಾಷೆಗೆ ಪರಿವರ್ತನೆ ಮಾಡುವಂತೆ ಆಜ್ಞಾಪಿಸಿದನು.[32] ಅಕ್ಬರ್ ಮಹಾಶಯನಿಗೆ ಹಿಂದೀ ಸಾಹಿತ್ಯದಲ್ಲಿದ್ದ ಆದರವು ಲೋಕಪ್ರಸಿದ್ಧವಾದುದು. ಸಂಸ್ಕೃತ ಪುಸ್ತಕಗಳನ್ನು ಪಾರ್ಸಿ ಭಾಷೆಗೆ ಭಾಷಾಂತರ ಮಾಡಲು ಒಂದು ಪ್ರತ್ಯೇಕವಾದ ಶಾಖೆಯನ್ನೇ ಸ್ಥಾಪಿಸಿದನು. ಈ ಉದ್ಯಮದಲ್ಲಿ ಅವನ ಮಿತ್ರರಾದ "ಅಬುಲ್ ಫಜೂಲ್ ಮತ್ತು ಅಬುಲ್ ಫೈಸಿ (Abul Fazul and Abul Faizi) ಇವರು ಮುಖ್ಯಾಧಿಕಾರಿ

---

[31] Epigraphica Indica Vol. VI, No. 48.

[32] Muslim Rule in India Dr. Ishvari Prasad, p. 167.

ಗಳಾಗಿ ಏರ್ಪಟ್ಟರು. ರಾಮಾಯಣ, ಮಹಾಭಾರತ, ಹರಿವಂಶ, ಲೀಲಾವತಿ, ಅಥರ್ವವೇದ, ಯೋಗವಾಸಿಷ್ಠ ಮುಂತಾದುವು ತರ್ಜುಮೆಯಾದುವು.

ಜಹಾಂಗಿರ್ ಮತ್ತು ಷಹಜಹಾ್ ಇವರ ಕಾಲದಲ್ಲಿ ಪರ್ಷಿಯನ್ ಮತ್ತು ಸಂಸ್ಕೃತ ಕವಿಗಳಿಗೆ ವಿಶೇಷವಾದ ಆಶ್ರಯವು ದೊರಕಿತ್ತು. ಷಹಜಹಾನನ ಆಸ್ಥಾನ ಕವಿ ಸಾರ್ವಭೌಮನಾದ ಜಗನ್ನಾಥ ಪಂಡಿತನು ಔದಾರ್ಯದಲ್ಲಿ, "ದಿಲ್ಲೀಶ್ವರೋವಾ ಜಗದೀಶ್ವರೋವಾ" "ಅನ್ಯೈರ್ನೃಪಾಲೈಃ ಪರಿದೀಯಮಾನಂ ಶಾಕಾಯ ವಾ ಸ್ಯಾತ್ ಲವಣಾಯ ವಾ ಸ್ಯಾತ್" ಎಂದು ದಿಲ್ಲೀಶ್ವರನನ್ನು ಹೊಗಳಿರುವನು. ಉದಯರಾಜನೆಂಬ ಮತ್ತೊಬ್ಬ ಕವಿಯು ಗುಜರಾತಿನ ಸುಲ್ತಾನನಾದ ಮಹಮೂದನನ್ನು, ಸಾಹಸದಲ್ಲಿ ಅರ್ಜುನನಿಗೂ ಔದಾರ್ಯದಲ್ಲಿ ಕರ್ಣನಿಗೂ ಹೋಲಿಸಿರುವನು.[33]

ಮುಸಲ್ಮಾನರು ಹಿಂದುಗಳ ಭಾಷೆಯಾದ ಹಿಂದಿಯನ್ನು ಉದಾರಭಾವದಿಂದ ತಾವು ಕಲಿತು ಹಿಂದೀ ಕವಿಗಳಿಗೂ ವಿಶೇಷವಾಗಿ ಆಶ್ರಯವನ್ನು ಕೊಟ್ಟರು. ಅಕ್ಬರ್ ಚಕ್ರವರ್ತಿಯಂತೂ ಹಿಂದೀ ಭಾಷೆಯಲ್ಲಿ ಆಶುಕವಿ. ತನ್ನ ಮಕ್ಕಳಿಗೂ ಆನೆ ಕುದುರೆಗಳಿಗೂ ಹಿಂದೂ ಹೆಸರುಗಳನ್ನಿಟ್ಟಿದ್ದನು. ಸೂರ್ ದಾಸ್, ಹರಿದಾಸ್, ತುಲಸೀದಾಸ್ ಮುಂತಾದ ಅನೇಕ ಹಿಂದೀ ಕವಿಗಳು ರಾಜಕೀಯ ನೆರಳಿನಲ್ಲಿ ಬೆಳೆದರು. ಜಹಾಂಗೀರನೂ ಷಹಜಹಾನನೂ ಇದೇ ಮೇಲ್‌ಪಂಕ್ತಿಯನ್ನು ಅನುಸರಿಸಿ ಹಿಂದೀಕವಿಗಳಿಗೆ ವಿಶೇಷ ಆದರವನ್ನು ಕೊಟ್ಟರು. ಔರಂಗ

---

[33] Journal of The Bombay University, Sept. 40, pp. 103-110.

ಜೇಬನ ಸಭೆಯಲ್ಲಿಯೂ ಮತಿರಾಮ್, ಬೃಂದ, ಕಾಳಿದಾಸ, ತ್ರಿವೇದಿ, ಭೂಷಣ ಕವಿ ಮುಂತಾದ ಕವಿಗಳು ವಾಸವಾಗಿದ್ದರು. ತಮ್ಮ ಯಜಮಾನರಂತೆ ಮೊಗಲ್ ಸರದಾರರೂ ಕೂಡ ಹಿಂದೀ ಕವಿಗಳಿಗೆ ಪೋಷಕರಾಗಿದ್ದರು. ಬೈರಾಂಖಾನನ ಮಗ ಅಬ್ದುಲ್ ರಹಿಮಾನ್‌ಖಾನನು ತುಲಸೀದಾಸ್ ಮುಂತಾದ ಅನೇಕ ಕವಿಗಳಿಗೆ ಆಶ್ರಯದಾತನಾಗಿದ್ದನು. ಹಿಂದುಗಳೂ ಪಾರ್ಸಿ ಭಾಷೆಯನ್ನು ಕಲಿತು ಅನೇಕ ಕಾವ್ಯಗಳನ್ನು ರಚಿಸಿದರು. ಈ ಪರಸ್ಪರ ಸೌಹಾರ್ದವೂ, ಗೌರವವೂ, ತತ್ಕಾಲದ ಸಾಹಿತ್ಯದ ಮೇಲೆ ಪರಿಣಾಮಕಾರಿಯಾದುವು. ಆಗಿನ ಲೇಖಕರು ತಮ್ಮ ನಾಂದೀಶ್ಲೋಕದಲ್ಲಿ ತಮ್ಮ ಜಾತಿಧರ್ಮದಂತೆ ತಮ್ಮ ಸ್ವಂತ ದೇವತೆಗಳನ್ನು ಮಾತ್ರ ಪ್ರಾರ್ಥನೆ ಮಾಡುತ್ತಿರಲಿಲ್ಲ. ಬರಹಗಾರನು ಹಿಂದುವೇ ಆಗಲಿ ಮುಸಲ್ಮಾನನೇ ಆಗಲಿ ಪಾರ್ಸಿ ಭಾಷೆಯಲ್ಲಿ ಬರೆದರೆ ಮೊದಲು ಕರುಣಾಮಯನಾದ "ಅಲ್ಲಾ"ನನ್ನು ಸ್ತೋತ್ರಮಾಡುವುದು ರೂಢಿ. ಹಿಂದೀಭಾಷೆಯಲ್ಲಿ ಬರೆದರೆ ಮುಸಲ್ಮಾನರೂ ಸಹ ಹಿಂದೂದೇವತೆಗಳನ್ನು ಸ್ತೋತ್ರಮಾಡುವುದು ಪದ್ಧತಿ.

ರಹೀಂ ಎಂಬ ಕವಿಯು ತನ್ನ ಮದನಶತಕವನ್ನು "ಶ್ರೀಗಣೇಶಾಯನಮಃ" ಎಂಬ ವಾಕ್ಯದಿಂದ ಪ್ರಾರಂಭ ಮಾಡಿರುವನು. ಮಹಮದ್ ಉಲ್ಲಾ ದಕ್ಷಣೀ ಎಂಬಾತನು "ಶ್ರೀರಾಮಾನುಜಾಯನಮಃ, ಶ್ರೀಸರಸ್ವತಯೇನಮಃ, ಶ್ರೀಗಣೇಶಾಯನಮಃ" ಎಂದು ಸ್ತೋತ್ರಮಾಡಿ ತನ್ನ ಗ್ರಂಥವನ್ನು ಉಪಕ್ರಮಿಸಿರುವನು.[34]

[34] Proceedings of The Indian History Congress, p. 900.

ಈ ಪರಸ್ಪರ ವ್ಯವಹಾರದಿಂದ ಒಂದು ಹೊಸಭಾಷೆಯೇ ಉತ್ಪನ್ನವಾಯಿತು. ಅದೇ ಉರ್ದು ಎಂಬ ಭಾಷೆಯು. ಇದು ಎರಡು ಜನಾಂಗದ ಪರಸ್ಪರ ಸ್ನೇಹಭಾವದಿಂದ ಜನಿತ ವಾದದ್ದು. ಇದರ ಶೈಲಿಯೂ ಮಾತೂ, ಹಿಂದಿ ಭಾಷೆಯದು. ಇದರ ವ್ಯಾಕರಣಕ್ರಮವು ಪಾರ್ಸಿವ್ಯಾಕರಣವನ್ನು ಅನುಸರಿಸು ತ್ತದೆ. ಆದುದರಿಂದ ಉರ್ದುಭಾಷೆಯ ವಿಚಾರವಾಗಿ ಈಗ ನಡೆಯುತ್ತಿರುವ ಉದ್ವೇಗಕರವಾದ ವಿವಾದವು ನ್ಯಾಯಸಮ್ಮತ ವಲ್ಲ. ಇದೂ ಒಂದು ಭಾರತೀಯ ಭಾಷೆಯೇ. ಇದರ ಲಿಪಿ ವಿಚಾರವಾಗಿ ಮಾತ್ರ ಭಿನ್ನಾಭಿಪ್ರಾಯಗಳಿರುವುದು ಸಹಜ.

ಈ ವಿಧವಾಗಿ ಅನ್ಯದೇಶೀಯರು ಅತಿ ಆವೇಶದಿಂದ ದಂಡೆತ್ತಿಬಂದು ದೇಶದಲ್ಲಿ ವಿಪ್ಲವವನ್ನೆಬ್ಬಿಸಿ ಅಂತ್ಯದಲ್ಲಿ ತಮ್ಮ ರೂಪವನ್ನು ಮರೆಮಾಚಿ, ಹಿಂದುಗಳ ಜೀವನದ ಒಳಹೊಕ್ಕು, ಅದರ ತಿರುಳನ್ನು ಸವಿದು ಮತ್ತೆ ಒಂದು ವಿಧವಾದ ಸಂಸ್ಕೃತಿ ಯನ್ನೇ ಸೃಷ್ಟಿಮಾಡಿದುದು ಒಂದು ಅತ್ಯಾಶ್ಚರ್ಯಕರವಾದ ಘಟನೆ.

## ಧರ್ಮ

ಹಿಂದು-ಮುಸಲ್ಮಾನರ ಸ್ನೇಹಪೂರ್ವಕವಾದ ವ್ಯವಹಾರ ದಿಂದ ಇಬ್ಬರ ಮತಧರ್ಮಗಳೂ ಆಚಾರಗಳೂ ಬಹಳವಾಗಿ ಬದಲಾವಣೆಯನ್ನೂ ಪುಷ್ಟಿಯನ್ನೂ ಹೊಂದಿದವು. ಮುಸ ಲ್ಮಾನರ ರಾಜರುಗಳೂ, ಮುಖಂಡರೂ ತಮ್ಮ ರಾಜಕೀಯ ಉತ್ಕರ್ಷದಲ್ಲಿಯೇ ಮಗ್ನರಾಗಿದ್ದುದರಿಂದ ಹಿಂದುಗಳ ಧರ್ಮದ ಗೊಡವೆಗೆ ಹೋಗಲಿಲ್ಲ. ಇಸ್ಲಾಂ ಮತ ಪ್ರಚಾರದಲ್ಲಿ ಕೇವಲ ಆಲಸ್ಯವನ್ನೇ ತೋರಿದ್ದರು. ರಾಜಕೀಯ ಸಹಾಯದಿಂದ

ಇಸ್ಲಾಂ ಧರ್ಮವು ಭಾರತದಲ್ಲಿ ಹಬ್ಬಲಿಲ್ಲ. ಇದನ್ನು ವಿಕಾಸ ಪಡಿಸಿದ್ದು ಮಹಾತ್ಮರಾದ, ಉದಾರ ಚರಿತ್ರರಾದ ಮುಸಲ್ಮಾನೀ ಪೀರ್ "ಗಳ ಧರ್ಮಕಾರ್ಯ; ಹಿಂದುಗಳ ವೇದಾಂತತತ್ತ್ವವನ್ನು ಹೋಲುವ "ಸುಫಿ" ಧರ್ಮವನ್ನು ಸ್ಥಾಪನೆಮಾಡಿದರು. ಅವರಂತೆಯೇ ಯೋಗಾಭ್ಯಾಸ, ಧ್ಯಾನ, ಪೂಜಾವಿಧಿಗಳು ಅವರಲ್ಲಿ ಪ್ರಚಾರಕ್ಕೆ ಬಂದುವು. ಹಿಂದು ಜ್ಯೋತಿಷ್ಕರಿಗೆ ಮುಸಲ್ಮಾನರ ರಾಜ ಸಂಸ್ಥಾನಗಳಲ್ಲಿ ವಿಶೇಷ ಗೌರವವು ದೊರಕುತ್ತಿದ್ದಿತು. "ಫೀರ್" ಮತ್ತು "ಸಮಾಧಿ" ಗಳ ಪೂಜೆಯನ್ನು ಹಿಂದುಗಳಿಂದ ಕಲಿತರು, ಎಂದು ಕೆಲವು ವಿದ್ವಾಂಸರ ಅಭಿಪ್ರಾಯ. (Vide. History of the Moghuls. by P. Kennedy) ಮುಸಲ್ಮಾನರ ಪೋಷಣೆಯು, ಇಲ್ಲಾಹಿಯು ಮುಂತಾದ ಹೊಸ ಧರ್ಮಗಳ ಅನೇಕ ಭಾಗಗಳು ಹಿಂದುಗಳ ಪ್ರಭಾವಕ್ಕೆ ಒಳಪಟ್ಟುವೆಂದು ಹೇಳಬಹುದು.

ಹಿಂದುಗಳೂ ಮುಸಲ್ಮಾನರಲ್ಲಿ ಕಂಡುಬಂದ ಅನೇಕ ಸದ್ಭಾವಗಳನ್ನೂ ಆಚಾರಗಳನ್ನೂ ಅನುಸರಿಸಿದರು. ಇವರು ವಿಗ್ರಹಾರಾಧನೆ ಮಾಡದಿರುವುದು, ಸರ್ವಸಮತ್ವ ಮತ್ತು ಭ್ರಾತೃತ್ವಗಳು ಹಿಂದುಗಳ ಮನಸ್ಸಿನ ಮೇಲೆ ಪರಿಣಾಮಕಾರಿಗಳಾಗಿವೆ. ಮಹಾತ್ಮ ಕಬೀರನ ಚಾರಿತ್ರವೂ, ಕವಿತಾವಳಿಯೂ ಹಿಂದು ಮುಸಲ್ಮಾನರಿಬ್ಬರ ಮನಸ್ಸನ್ನು ಒಲಿಸಿಕೊಂಡಿವೆ. ಎರಡು ಪಂಗಡದವರೂ ಅವನನ್ನು ಗೌರವಿಸುತ್ತಾರೆ. ಸಿಕ್ ಮತಸ್ಥಾಪಕನಾದ ನಾನಕ್‌ನು ಮೆಕ್ಕಾ, ಮದೀನ ಮುಂತಾದ ಪ್ರಾಂತಗಳಲ್ಲಿ ಸಂಚಾರಮಾಡಿ ಭಾರತಕ್ಕೆ ತಿರುಗಿಬಂದು ದ್ವಂದ್ವಮತಗಳನ್ನು ಸಮನ್ವಯ ಮಾಡುವುದರಲ್ಲಿ ತನ್ನ ಜೀವನವನ್ನು ಕಳೆದನು. "ಎಲ್ಲಾ ಮತಗಳ ತಿರುಳೂ ಒಂದೇ" ಎಂದು

ಆರಿತ "ದಾದು ದಯಾಳು" ಎಂಬ ಮಹಾತ್ಮನು ಹೀಗೆ ಉದ್ಗಾರವನ್ನು ಮಾಡಿರುವನು. "ಸ್ವಾಮಿದೇವನೆ ನೀನೇ ರಾಮನು ಮತ್ತು ರಹೀಮನು; ನಿನ್ನ ನಾಮಗಳೇ ಕೇಶವ ಮತ್ತು ಕರೀಂ."

ಔರಂಗಜೇಬನ ಕಾಲದಲ್ಲಿ ಸಾಧುಪ್ರಾಣನಾಥ್ ಎಂಬವನು ವೇದಗಳಿಂದಲೂ ಖುರಾನಿನಿಂದಲೂ, ಸರ್ವಸಮ್ಮತವಾದ ಸೂಕ್ತಗಳನ್ನೂ ಸೂರಾಗಳನ್ನೂ ಸಂಗ್ರಹಿಸಿ ಒಂದು ಗ್ರಂಥ ವನ್ನೇ ನಿರ್ಮಾಣ ಮಾಡಿದನು. ಅವನ ಶಿಷ್ಯರಲ್ಲಿ ಪ್ರತಿಯೊ ಬ್ಬನೂ ಹಿಂದೂ ಮುಸಲ್ಮಾನರ ಮೂಲತತ್ವಗಳು ಒಂದೇ ಎಂದು ಪ್ರಮಾಣಪೂರ್ವಕವಾಗಿ ಸಮ್ಮತಿಯೀಯಬೇಕು. ಅದ ರಂತೆಯೇ ಪರಸ್ಪರ ಊಟ ಉಪಚಾರಗಳನ್ನು ಮಾಡುವುದೂ ಆವಶ್ಯಕ.7

## ಲಲಿತಕಲೆಗಳು

ಸಂಗೀತಕಲೆಯು ಮುಸಲ್ಮಾನರ ಕಾಲದಲ್ಲಿ ಹೊಸರೂಪ ವನ್ನು ಪಡೆದು ಸೃಷ್ಟಿಗೊಂಡಿತು. ಮುಸಲ್ಮಾನರ ಸಂಸ್ಥಾನಗ ಳಲ್ಲಿ ಕಲೆಗಳಿಗೂ ಕಲಾವಂತರಿಗೂ ಅಮೋಘವಾದ ಆಶ್ರಯ ದೊರಕುತ್ತಿದ್ದಿತು. ಸಂಗೀತದಲ್ಲಿ ಹಿಂದುಗಳ ಸಂಗೀತ, ಮುಸ ಲ್ಮಾನರ ಸಂಗೀತವೆಂದು ಪರಿಗಣಿಸುವುದು ಸಾಧ್ಯವಿಲ್ಲ. ಆದಿ ಕಾಲದಿಂದಲೂ ಭಾರತೀಯ ಸಂಗೀತವು ಮುಸಲ್ಮಾನರ ಮನಸ್ಸನ್ನು ಸೂರೆಗೊಂಡಿತು. "ಅಮೀರ್ ಖುಸ್ರು" ವೇ ಮುಂತಾದ ಪ್ರಚಂಡ ಕವಿಗಳು ಕೂಡ ಈ ಸಂಗೀತವನ್ನು ಲೋಕೋತ್ತರವೆಂದು ಪ್ರಶಂಸೆಮಾಡಿರುವರು. ಇಸ್ಲಾಮಿಯ ರಲ್ಲಿ ಕೆಲವರು ಸಂಗೀತವನ್ನು ಧರ್ಮಕ್ಕೆ ವಿರುದ್ಧವೆಂದೂ

ಮನುಷ್ಯನ ಮನಸ್ಸನ್ನು ದುಷ್ಟದಾರಿಯಲ್ಲಿ ಎಳೆಯುವುದೆಂದೂ ನಿಷೇಧಮಾಡಿದ್ದರು. ಆದರೆ ಈ ಭಾವನೆಯು ಬಹುಕಾಲ ನಿಲ್ಲಲಿಲ್ಲ. ಏಕೆಂದರೆ ಮುಸಲ್ಮಾನರಲ್ಲಿ ಅನೇಕರು ಹಿಂದೂಮತ ದಿಂದ ಬಂದವರು. ತಮ್ಮ ಜಾತಿ ಪರಿವರ್ತನೆಯಾದರೂ ತಮ್ಮ ಸಂಗೀತವನ್ನು ಬಿಟ್ಟು ಬಿಡಲಿಲ್ಲ. ಆದುದರಿಂದಲೇ ಹಿಂದುಗಳ ಸಂಗೀತವು ಮುಸಲ್ಮಾನರಲ್ಲಿ ಹೊಕ್ಕು ಅವರಲ್ಲಿ ಕೆಲವು ಅಂಶಗಳು ವೃದ್ಧಿಹೊಂದಿದವು. ಕೆಲವು ಹೊಸ ರಾಗಗಳೂ ರಾಗಮಾಲಿ ಗಳೂ ಸಿತಾರ್ ಮತ್ತು ಸಾರಂಗಿ ಮುಂತಾದ ವಾದ್ಯಗಳೂ ಮುಸಲ್ಮಾನ್ ಗವಾಯ್‌ಗಳಿಂದ ಸೃಷ್ಟಿಸಲ್ಪಟ್ಟವು.

ಉತ್ತರ ಹಿಂದೂಸ್ಥಾನದ ಜನಪದ ಸಾಂಗತ್ಯದಲ್ಲೂ ಪರ ಸ್ಪರ ಸೌಹಾರ್ದವನ್ನು ಕಾಣಬಹುದು. ಮಾಂಡವದ ರಾಣಿ ಯಾದ ರೂಪವತಿಯ ಹಾಡುಗಳನ್ನು ಜನಸಾಮಾನ್ಯರೆಲ್ಲರೂ ಹಾಡುತ್ತಿರುವರು. ಕಪೂರ್ತಲ ಸಂಸ್ಥಾನದ "ಅಬ್ದುಲ್ ರಹಿಮಾನ್" ಎಂಬವನ ಕವನಗಳು ಇದಕ್ಕೆ ಮತ್ತೊಂದು ನಿದರ್ಶನ. ಇವನ ಪೂರ್ವಿಕರು ಹಿಂದುಗಳಾಗಿದ್ದರು. ಆದುದ ರಿಂದ ಇವನಿಗೆ ಹಿಂದೂ ದೇವತೆಗಳಲ್ಲೂ ವಿಶ್ವಾಸ; ತನ್ನ ಇಸ್ಲಾಮೀ ಧರ್ಮದಲ್ಲೂ ಪರಮ ಆದರ. ಇವನು ಹಿಂದೀ ಕವನಗಳನ್ನು ಶ್ರೀಕೃಷ್ಣ ಪರಮಾತ್ಮನ ಪರವಾಗಿ ಹಾಡಿರುವನು. ಇದನ್ನು ಓದಿದವರು ಇವನನ್ನು ಒಬ್ಬ ಕೃಷ್ಣಭಕ್ತನಾದ ವೈಷ್ಣವ ಕವಿಯೆಂದು ಮೋಸಹೋಗುವರು. ಇವನ ಉರ್ದು ಪದ್ಯಗಳು ಇವನ ನಿಜವಾದ ಇಸ್ಲಾಮಿ ಭಕ್ತಿಯನ್ನು ವ್ಯಕ್ತಪಡಿಸುವುವು.

ಇದೇರೀತಿಯಾಗಿ ಮಧ್ಯಕಾಲದ ವಾಸ್ತುಶಿಲ್ಪ ಚಿತ್ರಕಲೆ ಗಳು ಹಿಂದೂಮುಸಲ್ಮಾನರ ಪರಸ್ಪರ ಉತ್ತೇಜನದಿಂದಲೇ ಬಹುಮುಖವಾಗಿ ವೃದ್ಧಿಹೊಂದಿ ಭಾರತಭೂಮಿಗೆ ಇಡೀ

ಜಗತ್ತಿನಲ್ಲೆಲ್ಲಾ ಕೀರ್ತಿಯನ್ನೂ ಗೌರವಗಳನ್ನೂ ತಂದುವು. ಘಜ್ನಿಮಹಮೂದನೂ ತೈಮೂರ್‌ಲಂಗನೂ ಭಾರತೀಯ ಶಿಲ್ಪಿಗಳ ಕೈವಾಡವನ್ನು ನೋಡಿ ಬೆರಗಾದರು. ಅವರಲ್ಲಿ ಅನೇಕರನ್ನು ಸೆರೆಹಿಡಿದು ಅವರಿಗೆ ಪುರಸ್ಕಾರವನ್ನು ಕೊಟ್ಟು ಘಜ್ನಿ ಮತ್ತು ಸಮರ್ಕಂಡ್ ದೇಶಗಳಿಗೆ ಕಳುಹಿಸಿ ಅಲ್ಲಿಯೂ ಅವರ ಕಲಾಜ್ಞಾನವನ್ನು ಸಾರ್ಥಕವಾಗುವಂತೆ ಹೊಸಹೊಸದಾದ, ಭವ್ಯವಾದ ಭವನಗಳನ್ನೂ ಮಸೀದಿಗಳನ್ನೂ ಕಟ್ಟಲು ನೇಮಕಮಾಡಿದರು. ಹಿಂದೂಸ್ಥಾನದ ಮುಸಲ್ಮಾನರ ರಾಜಸದನಗಳಲ್ಲಿಯೂ ಹಿಂದೂ ಶಿಲ್ಪಿಗಳಿಗೆ ವಿಶೇಷ ಉತ್ತೇಜನವು ದೊರಕಿತು. ಮಸೀದಿಗಳು, ಅರಮನೆಗಳು, ಕೋಟೆಗಳು—ಇವನ್ನು ಕಟ್ಟಿದವರೆಲ್ಲಾ ಹಿಂದೂಶಿಲ್ಪಿಗಳೇ. ಈ ಕಟ್ಟಡಗಳಲ್ಲಿ ವಿನ್ಯಾಸವು ಹಿಂದುಗಳಲ್ಲಿ ಪರಂಪರೆಯಾಗಿ ಬಂದ, ಜ್ಞಾನ ಮತ್ತು ಪದ್ಧತಿ; ಆದರೆ ಅಲಂಕಾರಗಳಲ್ಲಿ ಮಾತ್ರ ಇಸ್ಲಾಮೀ ಧರ್ಮಕ್ಕನುಗುಣವಾಗಿ ಮಾರ್ಪಾಟುಗಳು ಆದುವು.

ಮೊಗಲ್ ಸಂಸ್ಥಾನವು ಈ ಜಗತ್ತಿನ ಕಲಾಕೋವಿದರಿಗೆಲ್ಲಾ ಸುಪ್ರಸಿದ್ಧ ಆಶ್ರಯಸ್ಥಾನವಾಯಿತು. ತುರ್ಕಿಸ್ಥಾನ, ಪರ್ಶಿಯ ಮತ್ತು ಇತರ ದೇಶಗಳಿಂದ ಶಿಲ್ಪಿಜ್ಞರು ಇಲ್ಲಿಗೆ ಬಂದು ನೆಲಸಿದರು. ನಾನಾದೇಶದ ಶಿಲ್ಪರೀತಿಯ ಉತ್ಕೃಷ್ಟ ಭಾಗಗಳು ಉದ್ಧೃತವಾಗಿ ಭಾರತದಲ್ಲಿ ಒಂದು ಹೊಸದೂ ಅತಿ ಮನೋಹರವೂ ಆದ ಶೈಲಿಯೇ ಉತ್ಪನ್ನವಾಯಿತು. ಅಕ್ಬರನ "ಫತೇಫ್‌ಪೂರ್‌ಸಿಕ್ರಿ"ಯು ರಾಜಪುತ್ರರ ರೀತಿಯನ್ನು ಅನುಕರಿಸಿ ಈಗಲೂ ಪ್ರೇಕ್ಷಕರ ಮನವನ್ನು ಸೂರೆಗೊಳ್ಳುವುದು. ಅಕ್ಬರನ ಧ್ಯೇಯವು ಹಿಂದೂ ಮುಸಲ್ಮಾನರ ಐಕಮತ್ಯ.

ಅದನ್ನು ಸಿಕ್ರಿಯಲ್ಲಿ ಆಚರಣೆಗೆ ತಂದನು. ಲೋಕಪ್ರಸಿದ್ಧ ವಾದ "ತಾಜ್‌ಮಹಾಲ್" ಕಟ್ಟಡವು ಹಿಂದುಗಳ ಪಂಚ ರತ್ನರೀತಿಯ ವಿನ್ಯಾಸವನ್ನು ತೋರಿಸುವುದೆಂದು ಹ್ಯಾವೆಲ್, ಗಂಗೂಲಿ ಮುಂತಾದ ಕಲಾಭಿಜ್ಞರು ಅಭಿಪ್ರಾಯಪಟ್ಟಿರುವರು.

ಚಿತ್ರಕಲೆಯ ಒಂದು ಹೊಸಯುಗವೇ ಪ್ರಾರಂಭವಾಯಿತು. ಹೊಸರೂಪ, ಹೊಸಭಾವಗಳನ್ನು ಹೊಂದಿ ಇವರ ಕೀರ್ತಿಯೂ ಎಲ್ಲ ದಿಕ್ಕುಗಳಲ್ಲೂ ವ್ಯಾಪಿಸಿತು. ಇವರ ಅದ್ವಿತೀಯ ನೈಪುಣ್ಯವನ್ನು ಸರ್‌ಥಾಮಸ್‌ರೋ ಎಂಬ ಇಂಗ್ಲಿಷ್ ರಾಯಭಾರಿಯು ಶ್ಲಾಘನೆಮಾಡಿರುವನು. ಈ ಚಿತ್ರಕಾರರಲ್ಲಿ ಅನೇಕವಾಗಿ ಹಿಂದುಗಳೇ ಇದ್ದರು. ಬಸವ, ಕೇಶೀದಾಸ್ ಮತ್ತು ದಾಸ್ ವಂತ್ ಮುಂತಾದ "ದಿಗ್ಗಜಗಳು" ಅಕ್ಬರನ ಕಾಲದಲ್ಲಿ ಮೆರೆಯುತ್ತಿದ್ದರು. ಮುಸಲ್ಮಾನರ ಕಾವ್ಯಪುಸ್ತಕಗಳಿಗೆ ಚಿತ್ರವನ್ನು ಬರೆದು ಕೊಡುವುದಕ್ಕಾಗಿ ಅನೇಕ ಹಿಂದೂ ಚಿತ್ರಕಾರರು ನೇಮಿಸಲ್ಪಟ್ಟರು. ಶಾಸ್ತ್ರನಿಷಿದ್ಧವಾದರೂ ಮುಸಲ್ಮಾನರು ತಮ್ಮ ರೂಪುಗಳನ್ನು ಚಿತ್ರಿಸುವ ಪದ್ಧತಿಯನ್ನು ಪ್ರಾರಂಭಿಸಿದರು. ಈ ವ್ಯವಹಾರವು ರಾಜಪುತ್ರಸಂಸ್ಥಾನದಲ್ಲೂ ಆಚರಣೆಗೆ ಬಂದಿತು. ಆದುದರಿಂದಲೇ ಆ ಕಾಲದ ಮೊಗಲ್ ಮತ್ತು ರಾಜಪುತ್ರವೀರರ ಭಾವಚಿತ್ರಗಳನ್ನು ಈಗಲೂ ನಾವು ನೋಡಬಹುದು. ಅವರ ಶೀವಿ, ಸೌಂದರ್ಯಗಳು ಸ್ಫೂರ್ತಿದಾಯಕವಾಗಿ ಚಿತ್ರಿಸಲ್ಪಟ್ಟಿರುವುವು. ಈ ಕಲೆಯು ಪುರಾತನವಾದ ಅಜಂತಗುಹಾಲಯದ ರೇಖಾವಿನ್ಯಾಸ ಪದ್ಧತಿಯನ್ನನುಸರಿಸಿರುವುದು.

## ಆಚಾರ ವ್ಯವಹಾರ

ಈ ವಿಧವಾಗಿ ಮೊಗಲ್‌ಸಾಮ್ರಾಜ್ಯದಲ್ಲಿ ಭಾರತೀಯ ಸಂಸ್ಕೃತಿಯು ಮಿಳಿತವಾಗಿ ಅನೇಕ ಮುಖವಾಗಿ ವೃದ್ಧಿ ಹೊಂದಿತು. ಜನಗಳ ನಡೆ, ಉಡಿಗೆ, ಊಟಗಳು ಮಾರ್ಪಾ ಟನ್ನು ಹೊಂದಿದುವು. ಮುಸಲ್ಮಾನರ ಗಾಂಭೀರ್ಯಯುತವಾದ ವಂದನ ಸಂಬೋಧನಕ್ರಮಗಳು ಹಿಂದುಗಳಿಗೆ ಬಂದುವು. ಅವರ ದರ್ಬಾರಿನ ಶಿಸ್ತುಗಳನ್ನು ಹಿಂದೂರಾಜರು ಅನುಸರಿಸಿ ದರು. ರಾಜಪುತ್ರರ ರಾಜ್ಯಾಂಗಪದ್ಧತಿಗಳೆಲ್ಲವೂ ಮೊಗಲರಂ ತೆಯೇ ಆದುವು. ಮಹಾರಾಷ್ಟ್ರರಾದ ಪೇಶ್ವೆಗಳು ತಮ್ಮ ಪದ್ಧತಿಯನ್ನೂ ಮೊಗಲರಂತೆ ಪರಿಷ್ಕರಿಸಿದರು. ಕಛೇರಿಯ ವಿಭಾಗಗಳೂ ನಾಮಕರಣಗಳೂ ದಿಲ್ಲೀಶ್ವರರ ದರ್ಬಾರಿನಂತೆ ಏರ್ಪಟ್ಟವು.

ಮುಸಲ್ಮಾನರು ಕೂಡ ರಾಜಪುತ್ರರನ್ನು ಅನುಸರಿಸಿದರು. ತುರ್ಕಿಸ್ಥಾನದ ಎತ್ತರವಾದ "ಖುಲ್ಲಾವಿ" ಯನ್ನು ತ್ಯಜಿಸಿ ರಾಜಪುತ್ರರ "ಪಗಡಿ" ಯನ್ನು ವಿಶೇಷವಾಗಿ ಪ್ರೀತಿಸಿದರು ; ಮತ್ತು ತಮ್ಮ ಧರ್ಮಕ್ಕನುಸಾರವಾದ ಗಡ್ಡವನ್ನು ತೆಗೆಸಿ ರಾಜ ಪುತ್ರರಂತೆ ಮೀಸೆಯನ್ನು ಬೆಳಸಿದರು.

ಕಾಲಕ್ರಮದಲ್ಲಿ ಹಿಂದೂಗಳು ಯಾರು ಮುಸಲ್ಮಾನರು ಯಾರು ಎಂಬುದನ್ನು ಗುರುತಿಸುವುದೇ ಕಷ್ಟವಾಯಿತು. ಹಣೆಯ ತಿಲಕದಿಂದ, ಕಿವಿಯ ಕುಂಡಲದಿಂದ ಮಾತ್ರ ಇವನು "ಹಿಂದೂ," ಇವನು "ಮುಸಲ್ಮಾನ" ನೆಂದು ಗುರುತಿಸಬಹು ದಾಗಿತ್ತು. ಈ ವಿಧವಾದ ಸೌಹಾರ್ದವು ಬೆಳೆದುದು ಭಾರತೀ ಯರ ಪುಣ್ಯವೇ ಸರಿ.

ಈ ವಿಧವಾಗಿ ಅನೇಕ ಶತಮಾನಗಳಿಂದಲೂ ಗಂಗೆ ಯಮುನೆ ನದಿಗಳಂತೆ ಪ್ರವಹಿಸುತ್ತಿರುವ ಈ ಸೌಹಾರ್ದವು ಮತ್ತಿಷ್ಟು ವೃದ್ಧಿ ಹೊಂದಬೇಕೆಂಬುದೇ ಈ ಲೇಖನದ ಉದ್ದೇಶ. ಈ ವಿಷಯವಾಗಿ ಅಲಿಗಡ ವಿಶ್ವವಿದ್ಯಾನಿಲಯದ ಸ್ಥಾಪಕರಾದ ಸರ್ ಸೈಯದ್ ಅಹಮ್ಮದ್ ಎಂಬವರ ಅಮೋಘವಾದ ಭಾಷಣವನ್ನು ಭಾರತೀಯರಾದ ಪ್ರತಿ ಯೊಬ್ಬರೂ ನೆನಪಿನಲ್ಲಿಡುವುದು ಅತ್ಯಾವಶ್ಯಕ. ಇದೇ ನಮ್ಮ ದೇಶದ ಶ್ರೇಯಸ್ಸಿನ ದಾರಿ. "ನನಗಿಂತಲೂ ಹಿಂದೂ ಮುಸಲ್ಮಾನರ ಸೌಹಾರ್ದಕ್ಕಾಗಿ ಆಕಾಂಕ್ಷೆಯುಳ್ಳವರು ಮತ್ತೊಬ್ಬರಿಲ್ಲವೆಂದು ನಾನು ಹೇಳಬಲ್ಲೆನು. ಇಂಡಿಯಾದೇಶವು ಒಬ್ಬ ವಧುವೆಂದೂ ಹಿಂದೂ ಮುಸಲ್ಮಾನರು ಅವಳ ಎರಡು ನೇತ್ರಗಳೆಂದೂ ನಾನು ಅನೇಕಸಾರಿ ಹೇಳಿದೇನೆ; ಆ ಎರಡು ಕಣ್ಣುಗಳೂ ಒಂದೇ ಸಮನಾದ ಕಾಂತಿಯಿಂದ ಕೂಡಿರುವುದು ಅವಳ ಸೌಂದರ್ಯಕ್ಕೆ ಆವಶ್ಯಕ. ಆದುದರಿಂದ ಗೋಹತ್ಯೆ ಮಾಡಿ ಹಿಂದುಗಳ ಮನಸ್ಸನ್ನು ನೋಯಿಸುವುದು ಮೂರ್ಖತನದ ಪರಮಾವಧಿ. ನಮಗೆ ಪರಸ್ಪರ ಸ್ನೇಹಭಾವ ಇರಬೇಕಾದರೆ ಗೋಹತ್ಯವನ್ನು ಬಿಟ್ಟು ಆ ಸ್ನೇಹವನ್ನು ಬಯಸುವುದು ಬಹಳ ಆವಶ್ಯಕ." ಇಂತು ಸರ್ ಸೈಯದ್‌ರು ಅಪ್ಪಣೆ ಕೊಡಿಸಿ ನಮ್ಮ ದೇಶಕ್ಕೆ ಮಹೋಪಕಾರವನ್ನು ಮಾಡಿರುವರು.

# ಪರಿಶಿಷ್ಟ

ಯಾರು ಜಮ್ಮಿಗಳನ್ನು ಹಿಂಸಿಸುವರೋ ಅವರು ನನ್ನನ್ನೂ ಹಿಂಸಿಸುವರು.

ಮುಹಮ್ಮದ್ ಪೈಗಂಬರರ ವಚನಗಳು.

ಮತವಿಚಾರದಲ್ಲಿ ಬಲಾತ್ಕಾರಕೂಡದು. ನಂಬಿಕೆ ದೇವರಿಂದಲೇ ಬರಬೇಕಾದದ್ದು ; ಆದುದರಿಂದ ಜನರಲ್ಲಿ ಬಲಾತ್ಕಾರದಿಂದ ನಂಬಿಕೆಯನ್ನು ಹುಟ್ಟಿಸಲು ಪ್ರಯತ್ನಮಾಡಬಾರದು.

ಮುಹಮ್ಮದ್ ಪೈಗಂಬರರ ವಚನಗಳು.

ನಜರಾನ್ ಮತ್ತು ಅದರ ಸುತ್ತಮುತ್ತಲಿರುವ ಪ್ರದೇಶಗಳಲ್ಲಿರುವ ಕ್ರೈಸ್ತಮತಸ್ಥರಿಗೆ ಅವರ ಪ್ರಾಣ, ಮತ ಮತ್ತು ಆಸ್ತಿಪಾಸ್ತಿಗಳಿಗೆ ದೇವರ ರಕ್ಷಣೆಯನ್ನೂ ಪೈಗಂಬರರ ಅಭಯವಾಗ್ದಾನವನ್ನೂ ಕೊಟ್ಟಿದೆ. ಅವರ ಮತಾಚಾರಗಳಿಗೂ ಹಕ್ಕುಗಳಿಗೂ ಯಾವ ವಿಧವಾದ ಅಡಚನೆಗಳೂ ಇರಕೂಡದು. ಕ್ರೈಸ್ತಗುರುಗಳನ್ನು ಅವರ ಮಠಗಳಿಂದಲೂ ಕ್ರೈಸ್ತ ಸಂನ್ಯಾಸಿಗಳನ್ನು ಅವರ ಆಶ್ರಮಗಳಿಂದಲೂ ಹೊರಹೊರಡಿಸಕೂಡದು. ಎಂದಿನಂತೆ ದೊಡ್ಡದು ಮತ್ತು ಸಣ್ಣದು–ಎಲ್ಲವನ್ನೂ ಅವರು ಚಿರಕಾಲವೂ ಅನುಭವಿಸಲಿ.

**ಮೌಂಟ್‌ಸೆನ್ಯೆ ಕ್ರೈಸ್ತರಿಗೆ ಮುಹಮ್ಮದ್ ಪೈಗಂಬರರು ಕೊಟ್ಟ ಸನ್ನದು.**

ಪ್ರಚಾರಪುಸ್ತಕಮಾಲಿಯನ್ನು ಕುರಿತು

## ಕೆಲವು ಅಭಿಪ್ರಾಯಗಳು

---

" ಜನಸಾಮಾನ್ಯಕ್ಕೆ ಗಾಢವಾದ ಆಸಕ್ತಿಯಿರುವ ವಿಷಯ ಗಳ ಮೇಲೆ ವಿಶ್ವವಿದ್ಯಾನಿಲಯದ ಅಧ್ಯಾಪಕರು ಕೊಟ್ಟ ಪ್ರಚಾರೋಪನ್ಯಾಸಗಳನ್ನು ಈ ರೀತಿಯಾಗಿ ಸ್ಥಿರರೂಪದಲ್ಲಿ ನಿಲ್ಲಿಸಬೇಕೆಂಬ ವಿಶ್ವವಿದ್ಯಾನಿಲಯದ ಈ ಪ್ರಯತ್ನವು ನನಗೆ ಮೆಚ್ಚಿಕೆಯಾಗಿದೆ. . . . ಈ ಉದ್ಯಮಕ್ಕಾಗಿ ವಿಶ್ವವಿದ್ಯಾನಿಲಯವನ್ನು ನಾನು ತುಂಬ ಆದರದಿಂದ ಅಭಿನಂದಿಸುತ್ತೇನೆ."

—ಅಮೀರ್-ಉಲ್-ಮುಲ್ಕ್

ಸರ್ ಮಿರ್ಜಾ ಎಂ. ಇಸ್ಮಾಯಿಲ್ ಅವರು.

---

" ಸ್ವಾರಸ್ಯವುಳ್ಳ ವಿಷಯಗಳನ್ನು ಕುರಿತು ಇಷ್ಟು ಸುಂದರ ವಾದ ಕೈಪಿಡಿಗಳನ್ನು ಪ್ರಕಟಿಸಿರುವುದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ಇವು ಅಚ್ಚರಿಗೊಳಿಸುವಷ್ಟು ಅಗ್ಗವಾಗಿವೆ ; ಒಳ್ಳೆಯ ಮುದ್ರಣಕ್ಕೆ ಇಲ್ಲಿರುವುದಕ್ಕಿಂತ ಹೆಚ್ಚಾಗಿ ಬಯಸ ಬೇಕಾದದ್ದೇನಿದೆ ? "

—ಶ್ರೀಮಾನ್ ರಂ. ರಾ. ದಿವಾಕರ ಅವರು.

" ಇವು ಜೇಬಿನಲ್ಲಿ ಅಡಗಬಹುದಾದ ಸಣ್ಣ ಆಕಾರದಲ್ಲಿ ಮುದ್ದಾಗಿ ಅಚ್ಚಾಗಿವೆ. . . . ಆಯಾ ಶಾಸ್ತ್ರದಲ್ಲಿ ನುರಿತ ವಿದ್ವಾಂಸರು ಸಪ್ರಮಾಣವಾಗಿ, ರಸವತ್ತಾಗಿ ಸುಲಭವಾಗಿ ಬರೆದಿರುತ್ತಾರೆ. . . ."

—'ಪ್ರಬುದ್ಧ ಕರ್ಣಾಟಕ.'

---

" ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದವರು ನಡೆಸುತ್ತಿರುವ ಸಂಸ್ಕೃತಿಯ ಸಪ್ತಾಹಗಳ ಬೆಲೆಯನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಸಂಸ್ಕೃತಿ ಪ್ರಸಾರವನ್ನು ಮೀರಿಸಿದ ಕೆಲಸ ಇನ್ನೊಂದುಂಟೆ? ಖಂಡಿತವಾಗಿಯೂ ಇಲ್ಲ. ಆದಕಾರಣ ಲಘು ಸಾಹಿತ್ಯವನ್ನು ಸಿದ್ಧಮಾಡಿಸಿ ಅವುಗಳನ್ನು ಜನಸಾಮಾನ್ಯದಲ್ಲಿ ಪ್ರಕಟಿಸುತ್ತಿರುವ ವಿಶ್ವವಿದ್ಯಾನಿಲಯದವರನ್ನು ನಾವು ಎಷ್ಟು ವಿಧವಾಗಿ ಹೊಗಳಿದರೂ ಕಡಿಮೆ. ಈ ಉಪಕಾರಕ್ಕಾಗಿ ಕನ್ನಡನಾಡಿನ ಜನರು ವಿಶ್ವವಿದ್ಯಾನಿಲಯಕ್ಕೆ ಅತ್ಯಂತ ಋಣಿಗಳಾಗಿದ್ದಾರೆ. . . . . . . . . . . . . . . . . .

ವಿಶ್ವವಿದ್ಯಾನಿಲಯದ ಉದ್ದೇಶವು ಇಂತಹ ಪ್ರೌಢ ಪ್ರಬಂಧಗಳಿಂದ ಸಾರ್ಥಕವಾಗುವುದರಲ್ಲಿ ಲೇಶವೂ ಸಂದೇಹವಿಲ್ಲ. ಪ್ರಚಾರಪುಸ್ತಕ ಮಾಲೆಯ ವ್ಯವಸ್ಥಾಪಕರನ್ನು ಅಭಿನಂದಿಸಲೇಬೇಕು. ಮುದ್ದಾದ ಅಚ್ಚು, ಕಟ್ಟು. ಬೆಲೆ ಕೇವಲ ೨ ಆಣೆ."

—'ವಿಶ್ವಕರ್ಣಾಟಕ'

# ಮೈಸೂರು ವಿಶ್ವವಿದ್ಯಾನಿಲಯ
## ಪ್ರಚಾರ ಪುಸ್ತಕಮಾಲೆ

೧. ಖಗೋಳಶಾಸ್ತ್ರ ಪ್ರವೇಶ- (೩ನೆಯ ಮುದ್ರಣ)
ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.

೨. ಸಮಾಜದ ರೋಗ ರುಜಿನಗಳು-(೩ನೆಯ ಮುದ್ರಣ)
ಜಿ. ಹನುಮಂತರಾವ್, ಎಂ.ಎ

೩. ತೆರಿಗೆ-ಬಿ. ಆರ್. ಸುಬ್ಬರಾವ್, ಎಂ.ಎ. (೩ನೆಯ ಮುದ್ರಣ)

೪. ನವರತ್ನಗಳು-ಎಚ್. ಸುಬ್ಬಜೋಯಿಸ್, ಎಂ.ಎಸ್‌ಸಿ.

೫. ನಮ್ಮ ಹಳ್ಳಿಗಳು-ಜಿ. ಎನ್. ಕೃಷ್ಣಮೂರ್ತಿ, ಎಂ.ಎ.

೬. ಕುಮಾರವ್ಯಾಸ-ಎಸ್. ವಿ. ರಂಗಣ್ಣ, ಎಂ.ಎ.

೭. ಹಂಪೆಯ ಹರಿಹರ-ಡಿ. ಎಲ್. ನರಸಿಂಹಾಚಾರ್, ಎಂ.ಎ

೮. ಕನ್ನಡಸಾಹಿತ್ಯ-ಕೆ. ವೆಂಕಟರಾಮಪ್ಪ, ಎಂ.ಎ.

೯. ವಿದ್ಯುಚ್ಛಕ್ತಿಯ ವೈಭವ-ಬಿ. ಎ. ಕೃಷ್ಣಸ್ವಾಮಿರಾವ್,
ಎಂ.ಎಸ್‌ಸಿ.

೧೦. ಪಂಪ-ತೀ. ನಂ. ಶ್ರೀಕಂಠಯ್ಯ, ಎಂ.ಎ.

೧೧. ಪ್ರಾಣಿಜೀವನ-ಎ. ನಾರಾಯಣರಾವ್, ಎಂ.ಎಸ್‌ಸಿ.

೧೨. ಕನಸುಗಳು-ಎನ್. ಎಸ್. ನಾರಾಯಣಶಾಸ್ತ್ರಿ, ಎಂ.ಎ.

೧೩. ಮದುವೆ-ನಾ. ಕಸ್ತೂರಿ, ಎಂ.ಎ., ಬಿ.ಎಲ್.

೧೪. ನಮ್ಮ ಆರ್ಥಿಕ ದೃಷ್ಟಿ-ಎಸ್. ಗೋಪಾಲಸ್ವಾಮಿ, ಎಂ.ಎ.

೧೫. ವಾಯುಗುಣ-ಕೆ. ಶೇಷಾದ್ರಿ ಅಯ್ಯಂಗಾರ್,
ಎಂ.ಎಸ್‌ಸಿ., ಎಲ್‌ಎಲ್.ಬಿ.

೧೬. ಬೆಳಕು-ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.

೧೭. ಕರ್ನಾಟಕ ಕಾದಂಬರಿ-ವಿ. ಸೀತಾರಾಮಯ್ಯ, ಎಂ.ಎ.
(೨ನೆಯ ಮುದ್ರಣ)

೧೮. ಕಾಳಿದಾಸನ ಕಾವ್ಯಗಳು-ಎಸ್. ರಾಮಚಂದ್ರರಾವ್, ಎಂ.ಎ.
(೨ನೆಯ ಮುದ್ರಣ)

೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ-(೨ನೆಯ ಮುದ್ರಣ)
ಪಿ. ಜಿ. ಸತ್ಯಗಿರಿನಾಥನ್, ಎಂ.ಎ

(ಪ್ರ. ತಿ. ನೋ.)

೩೦. ಕಣ್ಣು ಮತ್ತು ಅವರ ರಕ್ಷಣೆ—ಡಿ. ಶಿವಮೂರ್ತಿ, ಬಿ.ಎ., ಎಂ.ಬಿ.ಬಿ.ಎಸ್.

೩೧. ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.

೩೨. ಶಿಲಾವಿಚಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಸ್.

೩೩. ಸಂಘೋದ್ಯಾನ—ಬಿ. [illegible], ಎಂ.ಎ.

೩೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.

೩೫. ಅಜಂತ ಮತ್ತು ಎಲ್ಲೋರ—ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.

೩೬. ಸಾರಜನಕದ ಮಹತ್ವ—ಎನ್. [illegible], ಎಂ.ಎಸ್‌ಸಿ.

೩೭. ಪ್ರಾಣ—ಎಚ್. ಎಲ್. ಹರಿಯಪ್ಪ, ಎಂ.ಎ.

೩೮. ಪಾಶ್ಚಾತ್ಯ ರಾಜಕೀಯತತ್ತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.

೩೯. ಸರ್ವಜ್ಞ ಕವಿ—ಎ. ಆರ್. ಕೃಷ್ಣಶಾಸ್ತ್ರಿ, ಎಂ.ಎ.

೪೦. ರಕ್ತ—ಡಿ. ಶಿವಮೂರ್ತಿ, ಬಿ.ಎ., ಎಂ.ಬಿ.ಬಿ.ಎಸ್.

೪೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್, ಎಂ.ಎ.

೪೨. ಅಕ್ಕಮಹಾದೇವಿ—ಎಸ್. ಡಿ. [illegible], ಎಂ.ಎ.

೪೩. ಗಣಿತಶಾಸ್ತ್ರದ ಸ್ವರೂಪ—ಕೆ. ಎಸ್. ಶ್ರೀನಿವಾಸ ಅಯ್ಯಂಗಾರ್, [illegible]

೪೪. ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.

೪೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.

೪೬. ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.

೪೭. ಹಿಂದೂಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—[illegible], ಎಂ.ಎ., ಬಿ.ಟಿ.

ಸಾಧಾರಣ ಪ್ರತಿ ೩ ಆಣೆ; ವಾರ್ಷಿಕ ಚಂದಾ ರೂ. ೧-೪-೦.
ಉತ್ತಮ ಪ್ರತಿ ೬ ಆಣೆ; ವಾರ್ಷಿಕ ಚಂದಾ ರೂ. ೨-೦-೦.

ಸಂಪಾದಕ, ಪ್ರಚಾರಪುಸ್ತಕಮಾಲೆ,
ಯೂನಿವರ್ಸಿಟಿ ಆಫೀಸ್, ಮೈಸೂರು